Mr. SPEAKER.—With respect to the Preamble, the amendment tabled is not admissible. Clause 1, the Title and the Preamble. The question is:

"That clause 1, the Title and the Preamble stand part of the Bill."

The motion was adopted.

Clause 1, the title and the preamble were added to the Bill.

Motion to pass.

Sri R. M. PATIL.—Sir, I move;

"That the Mysore Police Bill 1962, as reported by the Joint Select Committee, and as amended, be passed."

Mr. SPEAKER.—The question is:

"That the Mysore Police Bill, 1962 as reported by the Joint Select Committee, and as amended, be passed."

The motion was adopted.

3-00 P.M.

MYSORE BHOODAN YAGNA BILL, 1963

as passed by Legislative Council

Motion to consider.

Sri M. V. KRISHNAPPA (Minister for Revenue).—Sir, I beg to move:

"That the Mysore Bhoodan Yagna Bill, 1963, as passed by the Legislative Council, be taken into consideration."

Mr. SPEAKER.—Motion moved:

"That the Mysore Bhoodan Yagna Bill, 1963, as passed by the Legislative Council, be taken into consideration."

†ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಇದೊಂದು ಬಹಳ ಉಪಯುಕ್ತವಾದ ಬಿಲ್ಲು. ಇದು ಬಹಳ ಕಾಲದ ಹಿಂದೆಯೇ ಶಾಸನವಾಗಬೇಕಾಗಿತ್ತು. ಈಗ್ಗೆ ಐದಾರು ವರ್ಷಗಳ ಹಿಂದೆಯೇ ಈ ಬಿಲ್ಲು ಬರಬೇಕಾದ ಪ್ರಮೇಯವಿತ್ತು. ಕಾರಣಾಂತರಗಳಿಂದಾಗಿ ಈ ಬಿಲ್ಲು ಆಗ ಬರಲು ಅವಕಾಶವಿಲ್ಲದೆ ಈಗ ನಮ್ಮಮುಂದೆ ಬಂದಿದೆ. ಈಗಾಗಲೇ ಈ ಬಿಲ್ಲು ವಿಧಾನ ಪರಿಷತ್ತಿನಲ್ಲಿ ಪಾಸಾಗಿ ಇಲ್ಲಿಗೆ ಬಂದಿದೆ. ಈ ಬಿಲ್ಲಿನ ಉದ್ದೇಶವಿಷ್ಟೇ. ಶ್ರೀ ವಿನೋಬಾಜಿಯವರ ನೇತೃತ್ವದಲ್ಲಿ ಹಿಂದೂ

(ಶ್ರೀ ಎಂ. ವಿ. ಕೃಷ್ಣಪ್ಪ)

ಸ್ಥಾನದಲೆಲ್ಲ ಈ ಭೂದಾನ ಚಳುವಳಿ ಬಹಳ ದೊಡ್ಡದಾಗಿದೆ. ಅಂತಹ ಭೂದಾನ ಯಜ್ಞಕ್ಕೆ ಅನುಕೂಲವಾಗುವಂತಹ ವಿಧೇಯಕ ಇದು. ಹಳ್ಳಿಯಲ್ಲಿ ಇದನ್ನು ಭೂದಾನದ ಹೆಗ್ಗಣ ಎಂದು ಹೇಳುತ್ತಾರೆ. ಈ ಚಳವಳಿಯ ಮೂಲಕ ಭೂ ವಿಹೀನರಿಗೆ ಲಕ್ಷಾಂತರ ಎಕರೆಗಳಷ್ಟು ಭೂಮಿ ದಾನವಾಗಿ ಬಂದು ಹಂಚಲಾಗುತ್ತಿದೆ. ನಮ್ಮ ಸಂಸ್ಥಾನದಲ್ಲಿಯೂ ಶ್ರೀಮಂತರು ಬಡವರಿಗೋಸ್ಕರ ಸುಮಾರು ೨೨-೨೩, ಸಾವಿರ ಎಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದಾರೆ. ಈ ಭೂಮಿಯನ್ನು ಭೂಮಿ ಇಲ್ಲದೇ ಇರುವ ಬಡ ರೈತರಿಗೆ ಕೊಟ್ಟು ಅವರು ಅದನ್ನು ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರಬಹುದು ಎನ್ನುವ ದೃಷ್ಟಿಯಿಂದ ಈ ಬಿಲ್ಲನ್ನು ಇಲ್ಲಿ ತಂದಿದ್ದೇವೆ. ಇಂಡಿಯಾದೇಶದಲ್ಲೆಲ್ಲಾ ಶ್ರೀ ವಿನೋಬಾಜೀಯವರಿಗೆ ಲಕ್ಷಾಂತರ ಎಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದಾರೆ. ನಮ್ಮ ಸಂಸ್ಥಾನ ಕೊಟ್ಟಿರುವುದು ಸ್ವಲ್ಪ ಕಡಿಮೆ. ಮುಂದೆ ವಿನೋಬಾಜಿಯವರು ಬರುವ ಕಾಲಕ್ಕೆ ಇಲ್ಲಿಯೂ ಬಹಳ ಜನ ಭೂಮಿಯನ್ನು ಕೊಡಬಹುದು. ಅಲ್ಲದೆ ಇದರಿಂದ ಜನರಲ್ಲಿ ಬಹಳ ಒಳ್ಳೆಯ ಪರಿಣಾಮವುಂಟಾಗಿದೆ. ಹಿಂದೂಸ್ಥಾನದಲ್ಲೆಲ್ಲಾ "Psychological atmosphere" ಎಂದರೆ ಭೂರಹಿತರಿಗೆ ಭೂಮಿಯನ್ನು ಕೊಡಬೇಕೆನ್ನುವ ಭಾವನೆ ಜನಗಳಲ್ಲಿ ಮೂಡಿದೆ. ಹೆಚ್ಚಾಗಿ ಭೂಮಿಯನ್ನು ಹೊಂದಬಾರದು; ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಬೇಕು ಎನ್ನುವ ಸದ್ಭಾವನೆ ಜನಗಳಲ್ಲಿ ಬಂದಿದೆ. ವಿನೋಬಾಜೀಯವರಿಗಾಗಿ ಕೊಟ್ಟಿರುವ ಭೂಮಿ ನಮ್ಮ ರಾಜ್ಯದಲ್ಲಿ ಸುಮಾರು ೨೨ಸಾವಿರ ಎಕರೆಗಳಷ್ಟಿರಬಹುದು. ಆ ಕೆಲಸವನ್ನು ಸುಗಮ ಮಾಡುವ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದ್ದೇವೆ. ಈ ಬಿಲ್ಲಿನ ಪ್ರಕಾರ ಭೂಮಿಯಿರುವವರು ಭೂದಾನಕ್ಕಾಗಿ ವಿನೋಬಾಜೀಯವರಿಗಾಗಲೀ ನಮ್ಮ ಸರಕಾರಕ್ಕಾಗಲೀ ಕೊಡಬಹುದು. ಯಾರಾದರೂ ಹಕ್ಕಿಲ್ಲದೇ ಬೇರೆಯವರ ಭೂಮಿಯನ್ನು ಕೊಟ್ಟಾಗ ತೊಂದರೆಯಾದರೆ ಅದರ ಮೇಲೆ ಡೆಪ್ಯೂಟೀಕಮೀಷನರಿಗೆ ಅಥವಾ ಡಿವಿಜನಲ್ ಕಮೀಷನವರಿಗೆ ಅಪೀಲು ಮಾಡಿಕೊಳ್ಳಲು ಅವಕಾಶ ಇದರಲ್ಲಿದೆ. ಮತ್ತು ಸರಕಾರದವರು ಇದಕ್ಕಾಗಿ ಒಂದು ಬೋರ್ಡನ್ನು ನೇಮಿಸಲು ಅವಕಾಶವಿದೆ, ಇದರಲ್ಲಿ. ಈ ಬೋರ್ಡಿನಲ್ಲಿ ನಾಲ್ಕು ಜನರಿಗಿಂತ ಕಡಿಮೆ ಇಲ್ಲದ ಹಾಗೂ ಒಂಬತ್ತು ಜನರಿಗಿಂತ ಹೆಚ್ಚಾಗಿರದ ಸದಸ್ಯರು ಇರಬಹುದು, ಹಾಗೂ ಒಬ್ಬರನ್ನು ಚೇರ್‌ಮನ್ನರನ್ನಾಗಿ ನೇಮಿಸಬಹುದು ಎಂದಿದೆ. ಇದರಲ್ಲಿ ರಾಜಕೀಯವೇನಿಲ್ಲ. ವಿನೋಬಾಜಿಯವರು ಈ ಬೋರ್ಡಿನಲ್ಲಿ ಯಾರನ್ನು ಸದಸ್ಯರನ್ನಾಗಿ ಚೇರ್ಮನ್ನರನ್ನಾಗಿ ನೇಮಿಸಬೇಕೆಂದು ಹೇಳುತ್ತಾರೋ ಅಂತಹವರನ್ನೇ ಸರಕಾರದವರು ನೇಮಕಮಾಡುತ್ತಾರೆ, ಮತ್ತು ಅವರು ಕೊಡುವ ಹೆಸರಿನ ಪಟ್ಟಿಯನ್ನೇ ಸರಕಾರ ಒಪ್ಪಿಕೊಳ್ಳಬೇಕೆಂದು ಇದರಲ್ಲಿದೆ. ಆದರೆ ಒಂದು ಗೊತ್ತಾದ ಕಾಲದಲ್ಲಿ ವಿನೋಬಾಜಿಯವರು ಈ ಬೋರ್ಡಿಗೆ ಸದಸ್ಯರನ್ನೂ ಮತ್ತು ಚೇರ್ಮನ್ನರನ್ನೂ ನೇಮಕಮಾಡದೇ ಹೋದಾಗ ಸರಕಾರದವರೇ ಈ ಬೋರ್ಡಿಗೆ ಚೇರ್ಮನ್ನರನ್ನು ಹಾಗೂ ಸದಸ್ಯರನ್ನೂ ನೇಮಕಮಾಡುತ್ತಾರೆ. ಇವರ ಅವಧಿ ನಾಲ್ಕುವರ್ಷವಿರುತ್ತವೆ. ನಾಲ್ಕುವರ್ಷಗಳಾದಮೇಲೆ ಈ ಬೋರ್ಡನ್ನು ರೀಕಾನ್‌ಸ್ಟಿಟ್ಯೂಟು ಮಾಡುತ್ತಾರೆ. ಹಾಗೂ ಈ ಬೋರ್ಡಿನ ಆಫೀಸು ಬೆಂಗಳೂರಿನಲ್ಲಿರುತ್ತದೆ. ದಾನವಾಗಿ ಕೊಡುವ ಭೂಮಿಯೆಲ್ಲಾ ಬೋರ್ಡಿನ ಮೂಲಕ ಹಂಚಲಾಗುತ್ತದೆ. ಭೂಮಿಯನ್ನು ಹಂಚುವಾಗ ರೈತರಿಂದ ಶುಲ್ಕವನ್ನು ವಸೂಲು ಮಾಡಿಕೊಳ್ಳುತ್ತಾರೆ. ಭೂಮಿಗೆ ಕಂದಾಯ ಡ್ರೈಲ್ಯಾಂಡಿಗೆ ಎರಡು ರೂಪಾಯಿದ್ದರೆ ಅದರ ಜೊತೆಗೆ ಎರಡು ರೂಪಾಯಿ ಶುಲ್ಕವನ್ನು ಕೊಡಬೇಕೆಂದು ಮಾಡಲಾಗಿದೆ. ಏಕೆಂದರೆ ಬೋರ್ಡಿನ ವ್ಯವಹಾರಗಳು ನಡೆಯಲು ಈ ಶುಲ್ಕವನ್ನು ವಸೂಲುಮಾಡಲಾಗುತ್ತದೆ. ಇದರಿಂದ ಬೋರ್ಡಿಗೆ ಭೂಮಿಯನ್ನು ಹಂಚಲು ಮತ್ತು ಸಾಗುವಳಿಮಾಡಲು ಸಹಾಯಮಾಡಿದಂತಾಗುತ್ತದೆ. ಯಾರಾದರೂ ಭೂಮಿಯನ್ನು ದಾನವಾಗಿ ಕೊಟ್ಟಾಗ ಅದನ್ನು ಯಾವರೀತಿಯಾಗಿ ತೆಗೆದುಕೊಂಡು ವಿತರಣೆ ಮಾಡಬೇಕು ಎನ್ನುವ ನಿಯಮಗಳನ್ನೂ ಇದರಲ್ಲಿ ಸೇರಿಸಲಾಗಿದೆ. ಇದು ಬಹಳ ಚಿಕ್ಕ ಮಸೂದೆ. ಮಾನ್ಯ ಸದಸ್ಯರೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆಂದು ಭಾವಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮಾನ್ಯ ಸಭಾಪತಿಗಳೇ, ನಮ್ಮ ಭಾರತ ದೇಶದಲ್ಲಿ ಪವಾಡ ಪುರುಷರಿಗೇನೂ ಅಭಾವವಿಲ್ಲ. ಕೆಲವರು ತಮ್ಮ ಜೀವನಕಾಲದಲ್ಲಿಯೇ ಪವಾಡ ಪುರುಷರಾಗಿ ಕಂಗೊಳಿಸುತ್ತಾರೆ. ಅಂತಹವರ ಉನ್ನತ ಗುಂಪಿಗೆ ಸೇರಿದವರು ನಮ್ಮ ವಿನೋಬಾಜೀಯವರು. ಅವರು ನಮ್ಮ ದೇಶದಲ್ಲಿ ಒಂದು ನಿಶ್ಯಬ್ಧವಾದ ಕ್ರಾಂತಿಯನ್ನುಂಟುಮಾಡುವುದಕ್ಕೋಸ್ಕರ ಸುಮಾರು ಹತ್ತುವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದಾರೆ. ಅವರಿಗೆ ಸರಕಾರದ ಪರವಾಗಿ ಒಂದು ರೀತಿ ಪುಷ್ಟೀಕರಣ ಮಾಡುವುದಕ್ಕಾಗಿ ಇಟ್ಟಿರತಕ್ಕ ಒಂದು ಪ್ರಾಮುಖ್ಯವಾದ ಹೆಜ್ಜೆಯ ರೀತಿಯಲ್ಲಿ ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಮಸೂದೆಯನ್ನು ಮೊದಲಿನಿಂದ ಕೊನೆಯವರೆಗೆ ಓದಿದಾಗ, ಹಲವಾರು ಪ್ರಸಂಗಗಳು, ತಾವೇ ತಾವಾಗಿ

ಎದ್ದು ನಿಲ್ಲುತ್ತವೆ. ಇದರಲ್ಲಿ ಬಹು ಮುಖ್ಯವಾದ ಪ್ರಸಂಗವೇನಿದೆ ಎಂದು ಹೇಳಿದರೆ ಸುಮಾರು ೧೯೫೭ನೇ ಇಸವಿಯಲ್ಲಿ ವಿನೋಬಾಜಿಯವರು ಪಾದಯಾತ್ರೆ ಮಾಡಿಕೊಂಡು ಮೈಸೂರು ಸಂಸ್ಥಾನಕ್ಕೆ ಬಂದಿದ್ದಾಗ್ಗೆ ಸುಮಾರು ಇಪ್ಪತ್ತು ಸಾವಿರ ಎಕರೆಗಳಷ್ಟು ಭೂಮಿಯನ್ನು ದಾನವಾಗಿ ಅವರಿಗೆ ಕೊಡಲಾಯಿತು. ೧೯೫೭ನೇ ಇಸವಿಯಿಂದ ೧೯೬೨ನೇ ಇಸವಿಯವರೆಗೆ, ಈ ಭೂಮಿಯನ್ನು ಯಾವ ಸಂದರ್ಭದಲ್ಲಿ ಕೊಡಲಾಯಿತು, ಆ ಭೂಮಿಯಿಂದ ಇಲ್ಲಿಯವರೆಗೆ ಉತ್ಪತ್ತಿಯಾದುದು ಎಷ್ಟು, ಭೂಮಿಯ ವಿಸ್ತೀರ್ಣವೇನು, ಭೂದಾನ ಸಂಘದವರು ಯಾವುದಾದರೂ ಭೂಮಿಯನ್ನು ಹಂಚಲು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ, ಈ ಎಲ್ಲ ಪ್ರಶ್ನೆಗಳಿಗೂ ಇದರಲ್ಲಿ ಉತ್ತರ ದೊರಕಲಿಲ್ಲ. ಈ ಪ್ರಸಂಗಗಳೆಲ್ಲವೂ ಸಾಧುವಾದವುಗಳೇ ಮತ್ತು ಈ ವಿಧೇಯಕಕ್ಕೆ ಬಹುಮಟ್ಟಿಗೆ ಸಂಬಂಧಪಟ್ಟ ಪ್ರಶ್ನೆಗಳು. ನಾವು ಈ ವಿಧೇಯಕವನ್ನು ಪಾಸುಮಾಡಿದರೆ ಹಿಂದೆ ಏನು ಭೂಮಿ ವಿನೋಬಾಜೀಯವರಿಗೆ ಬಂತು, ಮತ್ತು ಮುಂದೆ ಭೂಮಿ ಏನು ಅವರಿಗೆ ಬರಬಹುದು, ಇವೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ವಿಧೇಯಕವನ್ನು ನೋಡಬೇಕಾಗಿದೆ. ಸಾಧಾರಣವಾಗಿ ವಿನೋಬಾಜಿಯವರ ಈ ತತ್ವ ಅಥವಾ ಈ ಸಾಧನೆ ಟೀಕಾತೀತವಾದಂತಹದು. ಭೂಮಿಯ ವಿಚಾರದಲ್ಲಿ ಒಂದು ರೀತಿ ಸುಧಾರಣೆ ಆಗಬೇಕು ಎನ್ನುವ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಾನ್ಯ ಸಭೆಯು ಭೂ ಸುಧಾರಣಾ ಮಸೂದೆಯನ್ನು ಬಹುಮತದಿಂದ ಪಾಸು ಮಾಡಿ, ಅದಕ್ಕೆ ರಾಷ್ಟ್ರಪತಿಗಳ ಅನುಮತಿ ದೊರಕಿದರೂ, ಅದು ಜಾರಿಗೆ ಬಂದಿಲ್ಲ. ಈ ಭೂಸುಧಾರಣೆಯ ಬಗ್ಗೆ ನಮ್ಮ ಸರಕಾರ ಎಷ್ಟರಮಟ್ಟಿಗೆ ಆಸಕ್ತಿ ವಹಿಸಬೇಕೋ ಅಷ್ಟರಮಟ್ಟಿಗೆ ವಹಿಸಿಲ್ಲ, ಕರ್ತವ್ಯ ಲೋಪ ಮಾಡಿದ್ದಾರೆ ಎಂದು ಆಗಿಂದಾಗ್ಗೆ ಟೀಕೆ ಮಾಡುತ್ತಾ ಬಂದಿದ್ದೇವೆ. ಈ ವಿಧೇಯಕವಾದರೂ 1959ನೇ ಇಸವಿಯಲ್ಲಿ ಈ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟಿದ್ದರೂ ಅದು ಚರ್ಚೆಗೆ ಬಂದಿರುವುದು 1963ನೇ ಇಸವಿಯಲ್ಲಿ. ಇಷ್ಟು ಕಾಲ ವಿಳಂಬಮಾಡಿದುದನ್ನು ನೋಡಿದರೆ ಇದರಿಂದ ಸರಕಾರಕ್ಕೆ ಎಷ್ಟರಮಟ್ಟಿಗೆ ಈ ವಿಧೇಯಕದ ಬಗ್ಗೆ ಆಸಕ್ತಿ ಇದೆ ಎಂಬುದು ಗೊತ್ತಾಗುತ್ತದೆ. ಶ್ರೀ ವಿನೋಬಾ ಭಾವೆಯವರ ಹೆಸರನ್ನು ಉಪಯೋಗಿಸಿಕೊಂಡಿದ್ದಾರೆ. ಅವರ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿಲ್ಲ ಎಂದು ಮೊದಲೇ ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ನಮಗೆಲ್ಲರಿಗೂ ವಿನೋಬಾಜಿಯವರು ಗುರು ಸ್ಥಾನದಲ್ಲಿದ್ದಾರೆ. ನಾವು ಶಿಷ್ಯ ಸ್ಥಾನದಿಂದ ಅವರಿಗೆ ನಮಸ್ಕಾರ ಸಮರ್ಪಣೆ ಮಾಡುತ್ತೇವೆ. ಕಾಂಗ್ರೆಸ್ ಸರಕಾರ 15 ವರ್ಷಗಳಿಗಿಂತ ಹೆಚ್ಚಾಗಿ ರಾಜ್ಯಭಾರ ಮಾಡಿದರು ಏನನ್ನು ಸಾಧನೆ ಮಾಡಲು ವಿಫಲವಾಗಿದೆಯೋ ಅಂಥ ಕಾರ್ಯದಲ್ಲಿ ವಿನೋಬಾಜಿಯವರು ಯಾವ ಅಧಿಕಾರ ಸ್ಥಾನವಿರದಿದ್ದರೂ ಜನರ ಮನಸ್ಸಿನಲ್ಲಿ ಒಂದು ವಿಧವಾದ ಕ್ರಾಂತಿಕಾರಕ ಬದಲಾವಣೆ ಮಾಡುವುದಕ್ಕೆ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. 1960ನೆಯ ಇಸವಿಯಲ್ಲಿ ನಾನು ವಿದೇಶದಲ್ಲಿ ಇದ್ದಾಗ್ಗೆ ಶ್ರೀ ವಿನೋಬಾ ಭಾವೆಯವರು ಭಾರತದಲ್ಲಿ ಗುಂಡಾಗಳ ಜೊತೆಗೆ ಇದ್ದು ಅವರ ಮನಸ್ಸನ್ನು ಯಾವ ರೀತಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯವಾಯಿತು ಎಂಬ ಬಗ್ಗೆ ಹಲವಾರು ಸಹಸ್ರಾರು ವಿದೇಶಿಯರು ತಮ್ಮ ಮೆಚ್ಚುಗೆಯನ್ನೂ ಶ್ರೀ ವಿನೋಬಾ ಭಾವೆಯವರ ಬಗ್ಗೆ ಹೆಚ್ಚಿನ ಗೌರವ ಮಾನ್ಯತೆಗಳನ್ನು ನನ್ನ ಮುಂದೆ ವ್ಯಕ್ತಪಡಿಸಿದರು. ಈ ವಿಧೇಯಕದ ಬಗ್ಗೆ ನಾಲ್ಕು ಮಾತು ಆಡಲು ಬಯಸುತ್ತೇನೆ. ಈ ಮಸೂದೆಯಲ್ಲಿ ಬಹು ಪ್ರಾಮುಖ್ಯವಾದ ವಿಷಯ ಎಂದರೆ 3ನೇ ವಿಧಿ. ಭೂದಾನದಿಂದ ದೊರೆತ ಜಮೀನಿನ ಆಡಳಿತವನ್ನು ನಡೆಸಲು ಒಂದು ಬೋರ್ಡು ರಚನೆ ಮಾಡಬೇಕು ಮತ್ತು ಈ ಬೋರ್ಡಿನಲ್ಲಿ ನಾಲ್ಕು ಜನಕ್ಕೆ ಕಡಮೆ ಇಲ್ಲದ ಮತ್ತು ಒಂಬತ್ತು ಜನಕ್ಕೆ ಮೀರದಂತೆ ಸದಸ್ಯರನ್ನು ನಾಮಕರಣ ಮಾಡಬೇಕು. ಹಾಗು ಒಬ್ಬರು ಅಧ್ಯಕ್ಷರು ಇರಬೇಕು ಎಂಬುದನ್ನು ಈ ಸರಳವಾದ ಚಿಕ್ಕದಾದ ವಿಧಿಯಲ್ಲಿ ಅಳವಡಿಸಿದ್ದಾರೆ. ಎಲ್ಲ ಭಿನ್ನಾಭಿಪ್ರಾಯಗಳೂ ಎಲ್ಲ ವಾದಗಳೂ ಈ ಮೂರನೇ ವಿಧಿಯಮೇಲೆ ನಿಂತಿವೆ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಹಿಂದೆ ಕೂಡ ಹಲವಾರು ಸಮಿತಿಗಳನ್ನು, ಬೋರ್ಡುಗಳನ್ನು ರಚನೆ ಮಾಡಿದ್ದೇವೆ. ಉದಾಹರಣೆಗಾಗಿ ಮೈಸೂರು ಖಾದಿ ಸಲಹಾ ಸಮಿತಿ ರಚನೆಯಾಗಿದೆ. ಈ ಖಾದಿ ಸಲಹಾ ಸಮಿತಿಯ ಬಗ್ಗೆ ಪಬ್ಲಿಕ್ ಅಕೌಂಟ್ಸ ಕಮಿಟಿಯವರು ಮಾಡಿರತಕ್ಕಂಥ ಟೀಕೆಯನ್ನು ನಾವೆಲ್ಲರೂ ಕಂಡಿದ್ದೇವೆ. ಖಾದಿ ಕೂಡ ಭೂದಾನದಷ್ಟೇ ಪವಿತ್ರವಾದ ಸಂಗತಿ. ಕಾಂಗ್ರೆಸ್ ಹೊರಗಡೆ ಇರುವ ಅನೇಕರು ಕೂಡ ಖಾದಿಯ ಬಗ್ಗೆ ಮಮತೆ ಆಸಕ್ತಿ ಪೂಜ್ಯತೆಯನ್ನು ವ್ಯಕ್ತಪಡಿಸುತ್ತಾರೆ. ಇಂಥ ಖಾದಿ ಬೋರ್ಡಿನಲ್ಲಿ ಏನು ಅನಾಹುತ ನಡಿಯಿತು ಎಂಬುದನ್ನು ಕಳೆದ ಅಧಿವೇಶನದಲ್ಲಿ ಕೆಲವು ಸದಸ್ಯರು ವರ್ಣಿಸಿದ್ದಾರೆ. ಯಾವ ಕ್ಷೇತ್ರದಲ್ಲಿ ಭಿನ್ನಾಭಿಪ್ರಾಯವಿಲ್ಲವೋ, ಎರಡು ಅಭಿಪ್ರಾಯವಿಲ್ಲವೋ ಅಂಥ ಕ್ಷೇತ್ರದಲ್ಲಿ ಈ ಕಾನೂನಿನಿಂದ ಭಿನ್ನಾಭಿಪ್ರಾಯ ಉಂಟುಮಾಡಲು ಸರಕಾರ ಹೊರಟಿದ್ದಾರೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಈ ಬೋರ್ಡಿನ ರಚನೆಯ ತತ್ವವನ್ನು ವಿನೋಬಾಜಿಯವರು ಒಪ್ಪಿದ್ದಾರೆಯೋ ಇಲ್ಲವೋ ಎಂಬುದು ನಮಗೆ ತಿಳಿಯದು. ಈ ವಿಧೇಯಕಕ್ಕೆ ವಿನೋಬಾಜಿಯವರು ಆಶೀರ್ವಾದ ಮಾಡಿದ್ದಾರೆಯೋ

(ಶ್ರೀ ಎಸ್. ಎಂ. ಕೃಷ್ಣ)

ಪುಷ್ಟೀಕರಿಸಿದ್ದಾರೆಯೋ ಇಲ್ಲವೋ ಎಂಬ ವಿವರ ಕೊಡಲ್ಪಟ್ಟಿಲ್ಲ. ನಾನಾದರೂ ಹೇಳುತ್ತೇನೆ ಈ ಭೂದಾನ ತತ್ವವನ್ನು ವಿವೇಚನೆ ಮಾಡಿ ನೋಡಬೇಕು. ಇದು ಬಹು ಮುಖ್ಯವಾದುದು. ಸಮಾಜ ರಚನೆಯಲ್ಲಿ ಅಡಿಗಲ್ಲು ಇದ್ದ ಹಾಗೆ ಇದೆ. ಮನುಷ್ಯನ ಮನೋಭಾವನೆ ಬದಲಾಗಿ ಈ ಕಾರ್ಯ ನಡೆಯಬೇಕಾಗಿದೆ. ಕಾನೂನಿನ ಮೂಲಕ ಬಲವಂತದಿಂದ ಇಂಥ ಕಾರ್ಯ ಮಾಡಲು ಸಾಧ್ಯವಿಲ್ಲ. ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. ಯಾವ ರಾಜ್ಯದಲ್ಲಿ ಅದೆಷ್ಟು ಕಡಮೆ ಕಾನೂನು ಮಾಡುತ್ತಾರೆಯೋ ಅದು ಸುಖೀ ರಾಜ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಗಾಂಧೀಜಿಯವರ ಹೆಸರು ಹೇಳುವ ಕಾಂಗ್ರೆಸ್ ಸರಕಾರ ಇವೊತ್ತಿನ ದಿವಸ ಈ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸಿ ಈ ತತ್ವಕ್ಕೆ ತಿಲಾಂಜಲಿ ಕೊಟ್ಟಿದೆಯೆಂದು ನಾನು ಆಕ್ಷೇಪಣೆ ಮಾಡುತ್ತೇನೆ. ಈ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಿಧೇಯಕವನ್ನು ಅಭಿನಂದಿಸಬೇಕಾಗಿದೆ, ಟೀಕೆ ಮಾಡಬೇಕಾಗಿದೆ. ಆದುದರಿಂದ ಇದರಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು. ಬೋರ್ಡ್ ರಚನೆ ಮಾಡತಕ್ಕಂಥಾದ್ದು ಕೂಡ ಮುಖ್ಯವಾದ ಪ್ರಾವಿಸೋ ಆಗಿದೆ. ನಾಮಕರಣ ಮಾಡುವುದಕ್ಕೆ ಮುಂದೆ ವಿನೋಬಾಜಿಯವರ ಪೂರ್ವ ಸಮ್ಮತಿ, ಒಪ್ಪಿಗೆ ಪಡೆಯಬೇಕು ಎಂದಿದೆ. ವಿನೋಬಾಜಿಯವರು ಆ ರೀತಿ ಸಲಹೆ ಶಿಫಾರಸು ಮಾಡಿದರೆ ಸರಿಯಾಗಿರುತ್ತದೆ. ಒಂದು ಪಕ್ಷ ಶಿಫಾರಸು ಮಾಡಲು ಅವರು ತಯಾರು ಇಲ್ಲದೇ ಹೋದರೆ ಆಗ್ಗೆ ಸರಕಾರದವರು ಏನು ಮಾಡುತ್ತಾರೆ ? ಇದೊಂದು ಬಹು ಸೂಕ್ಷ್ಮವಾದ ಅಂಶವನ್ನು ಈ ಮಸೂದೆಯಲ್ಲಿ ಕಾಣಿಸಿದ್ದಾರೆ.

It is stated in the Bill as follows :—

"The Board shall be a body corporate with the name aforesaid having perpetual succession and a common seal with power..."

"The Board shall consist of a Chairman and such number of members, which shall not be less than four and more than nine, as the State Government may determine."

"provided further that if Shri Acharya Vinoba Bhave fails to nominate the Chairman or any member before the date, or any extended date, fixed in that behalf by the State Government shall appoint the Chairman or the members, as the case may be."

ನಾನು ಮೊದಲೇ ಅರಿಕೆಮಾಡಿಕೊಂಡಂತೆ, ವಿನೋಬಾಜಿಯವರು ಇಂಥವರೇ ಅಧ್ಯಕ್ಷರಾಗಲಿ, ಸದಸ್ಯರುಗಳಾಗಲಿ ಎಂದು ಶಿಫಾರಸು ಮಾಡುವುದಕ್ಕೆ ಹೇಗೆ ಸಾಧ್ಯ ? ಅವರ ಕಾಲ ಬಹಳಮಟ್ಟಿಗೆ ಪ್ರೆಶಸ್, ಅದನ್ನು ಇದಕ್ಕೆ ವಿನಿಯೋಗ ಮಾಡುವುದಕ್ಕೆ ಕಾಲ ಇರುತ್ತದೆ ಎಂಬ ವಿಚಾರದಲ್ಲಿ ನನಗೆ ಸಾಕಾದಷ್ಟು ನಂಬಿಕೆ ಇಲ್ಲ. ಬೋರ್ಡನ್ನು ಮಾಡುತ್ತೀರಾ: ನಾವು ಆಗಲೆ ನಮ್ಮ ದೇಶದಲ್ಲಿ ಅಧಿಕಾರ ಸ್ಥಾನಗಳಿಗೆ ನಡೆದಿರತಕ್ಕಂಥ ದ್ವಂದ್ವ್ಯಾಟವನ್ನು ನೋಡಿದ್ದೇವೆ. ನಾನು ಮಂತ್ರಿಯಾಗಬೇಕು, ನಾನು ಉಪಮಂತ್ರಿಯಾಗಬೇಕು, ನಾನು ಯಾವುದಾದರೂ ಸಹಕಾರ ಸಂಸ್ಥೆಯ ನಿಯೋಜಿತ ಅಧ್ಯಕ್ಷನಾಗಬೇಕು, ಸೇವಕಸಮಾಜದ ಸದಸ್ಯನಾಗಿ ಮೆರೆಯಬೇಕು, ಸಣ್ಣ ಪುಟ್ಟ ಸಂಸ್ಥೆಯ ಅಧ್ಯಕ್ಷನಾಗಿರಬೇಕು, ಆಮೇಲೆ ಸರಕಾರದ ಮೇಲೆ, ದೇಶದ ಮೇಲೆ ಪ್ರಭಾವ ಬೀರುವಂಥ ಶಕ್ತಿ ನನ್ನಲ್ಲಿರಬೇಕು ಎಂಬ ದೃಷ್ಟಿಯಲ್ಲಿ ಹೊರಟಿರತಕ್ಕಂಥ ಹಲವಾರು ರಾಜಕಾರಣಗಳು ಇಂಥ ಒಂದು ಬೋರ್ಡಿನ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿರಬೇಕು ಎಂದು ಕಾತರರಾಗಿ ಮುಂದೆಬಂದು ನಿಂತಿರುತ್ತಾರೆ. ಸರಕಾರದವರಾದರೂ ಕೂಡ, ಒಂದು ಪಕ್ಷ ಅವರ ಮೇಲೆ ಒಂದು ಅವಿಶ್ವಾಸ ನಿರ್ಣಯ ಬರಲಿ, ಅಥವಾ ಪಕ್ಷದೊಳಗೆ ಏನಾದರೂ ಕಾದಾಟ ಬರಲಿ, ಆಗ ಯಾರು ಗಲಾಟೆ ಮಾಡುತ್ತಾರೆಯೋ ಯಾರು ಇವತ್ತಿನ ದಿವಸ ಸರ್ಕಾರದವರ ಜೊತೆಯಲ್ಲಿದ್ದಾರೋ ಅಥವಾ ಸರಕಾರದ ವಿರುದ್ಧವಾಗಿ ಅಸಮಾಧಾನ ವ್ಯಕ್ತಪಡಿಸುತ್ತಾರೋ, ಅಂಥವರಿಗೆ ಇದು ಬೇಸಿಗೆ ಕಾಲದಲ್ಲಿ ತಣ್ಣೀರು ಸಿಕ್ಕರೆ ಎಷ್ಟು ಆಪ್ಯಾಯಮಾನವೊ ಅಷ್ಟೇ ಆಪ್ಯಾಯಮಾನ. ಸರಕಾರದವರು ಇಂಥ ಒಂದು ವಿಧೇಯಕವನ್ನು

ಮಾಡುವುದರ ಮೂಲಕ ವಿನೋಬಾಜಿಯವರ ಒಂದು ತತ್ವವನ್ನು ಇವತ್ತು ಮಲಿನ ಮಾಡಿದ್ದಾರೆ ಎಂದು ಬಹು ಸಂಕಟದಿಂದ ಹೇಳಬೇಕಾಗಿದೆ.

ಸ್ವಾಮಿ, ಇನ್ನು ಒಂದು ಕಡೆಯಿಂದ ಈ ವಿಚಾರದಲ್ಲಿ ಜಮೀನನ್ನು ಕೊಟ್ಟಿರತಕ್ಕಂಥ ಜನರೆಲ್ಲರೂ ಕೂಡ ಅಭಿನಂದರಿಗೆ ಅರ್ಹರಾದ ಜನ. ಕೆಲವು ಕಡೆ ಒಂದು ಇಂಥದೆ ಯಜ್ಞ ನಡೆಯಿತು; ಶ್ರೀ ಹನುಮಂತಯ್ಯನವರು ಅದನ್ನು ಯಜ್ಞ ಎಂದು ಕರೆಯಲಿಲ್ಲ, ಒಂದು ಮಿಷನ್ ಎಂದು ಕರೆದರು. ಅವರು ಮೈಸೂರಿನ ವಿನೋಬಾಜಿ ಆಗಬೇಕೆಂದಿದ್ದರು. ತಾವು ಒಬ್ಬರೇ ಏಕೆ ಆಗಬೇಕು, ತಮ್ಮ ಜೊತೆಯಲ್ಲಿರುವವರು ಮತ್ತು ಮಂತ್ರಿಗಳು ವಿನೋಬಾಜಿಯವರಾಗಬೇಕು ಎನ್ನುವ ದೃಷ್ಟಿಯಿಂದ 'Bhoodan for Vidyadan' ಎಂಬ ಒಂದು ಮಂತ್ರವನ್ನು ಉಚ್ಚರಿಸಿಕೊಂಡು ಹೊರಟರು. ನಮಗೆ ಗೊತ್ತಿರುವಹಾಗೆ ಹತ್ತಾರು ಸಹಸ್ರಾರು ಎಕರೆಗಳು ಕೂಡ ಹನುಮಂತಯ್ಯನವರ "ಭೂದಾನ ವಿದ್ಯಾದಾನ ಯಜ್ಞಕ್ಕೆ" ಸಂಬಂಧಪಟ್ಟ ಹಾಗೆ ಶೇಖರಿಸಲ್ಪಟ್ಟವು. ಇವತ್ತು ಅವತ್ತು ತೆಗೆದುಕೊಂಡ ಭೂದಾನ ವಿದ್ಯಾದಾನವೆಲ್ಲವೂ ಏನಾದುವು? ಶಾಲೆಗಳಿಗೆ ಅವು ಸಂದಾಯವಾದುವೆ, ಶಾಲೆಗಳ ಹೆಸರಿಗೆ ಆ ಜಮೀನುಗಳು ವರ್ಗಾಯಿಸಲ್ಪಟ್ಟವೇ—ಇವೆಲ್ಲವೂ ಕೂಡ ನಮ್ಮ ಮುಂದೆ ಇವೆ. ಏನಾದರೂ ಒಂದು ವಿಧೇಯಕವನ್ನು ಮಾಡ ಹೊರಟರೆ ಅದರಿಂದ ನೇರವಾಗಿ ಜನರಿಗೆ ಅನುಕೂಲವಾಗಬೇಕು ಮತ್ತು ನಾವು ಏನನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊರಟಿದ್ದೇವೆಯೊ, ಯಾವ ಧ್ಯೇಯವನ್ನು, ಉದ್ದೇಶವನ್ನು ಸಾರ್ಥಕಗೊಳಿಸಬೇಕೆಂದಿದ್ದೇವೆಯೋ ಅವು ಈ ಒಂದು ವಿಧೇಯಕದಿಂದ ಸಾಧನೆಯಾಗಬೇಕು. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಹನುಮಂತಯ್ಯನವರು ಯಾವುದೋ ಒಂದು ಜಿಲ್ಲೆಗೆ ಪ್ರವಾಸ ಹೋದಾಗ, ಅವರ ಹಿಂದೆ ಯಥಾಪ್ರಕಾರ ಆ ಜಿಲ್ಲಾಧಿಕಾರಿಗಳೂ ಮತ್ತಿತರ ವಂದಿಮಾಗಧರು ಹೊರಟರು. ಅವತ್ತು ಒಂದು ಹಳ್ಳಿಗೆ ಹೋದಾಗ ಜನತೆ ಜಮೀನು ಕೊಡಬೇಕೆಂದು ಹೇಳಿದರು. ಮಾಜಿ ಶಾಸನ ಸಭಾಸದಸ್ಯರೊಬ್ಬರು ತಾವು 25 ಎಕರೆಯನ್ನು ಭೂದಾನ ಯಜ್ಞಕ್ಕೆ ಕೊಡುತ್ತೇವೆಂದು ಹೇಳಿದರು. ಈ ವಾಗ್ದಾನವನ್ನು ಕೇಳಿದ ಮಿಕ್ಕವರು ಅವರ ಬಾಯಿನ ಮೇಲೆ ಬೆರಳಿಟ್ಟುಕೊಂಡರು. ಏಕೆಂದರೆ 25 ಎಕರೆ ಜಮೀನನ್ನು ಎಷ್ಟು ಧೈರ್ಯದಿಂದ ಕೊಡುತ್ತೇನೆಂದು ಹೇಗೆ ಹೇಳಿದರು ಎಂದು. ಅವರನ್ನೇ ಆಗ ಯಾರೋ ಒಬ್ಬರು ಹೇಗೆ ಕೊಡುತ್ತೀರ ಎಂದು ಕೇಳಿದರು. ಅದಕ್ಕೆ ಅವರು 25 ಎಕರೆ ಜಮೀನಿಗೆ ದರಖಾಸ್ತು ಹಾಕಿದ್ದೇನೆ, ಕೇಳಿದವರು ಬೇಕಾದರೆ ಅದನ್ನೇ ಕನ್‌ವರ್ಟ್ ಮಾಡಿಕೊಳ್ಳಲಿ ಎಂದು ಹೇಳಿದರು. ಈ ಪರಿಸ್ಥಿತಿ ಕಲ್ಪಿಸಿದರೇ ಈ ದಾನಗಳಲ್ಲಿ ಎಷ್ಟು ವಿನೋಬಾಜಿಯವರಿಗೆ ತಲುಪಿದೆ ಎನ್ನುವುದನ್ನು ಕೂಡ ನಾವು ವಿಮರ್ಶೆ ಮಾಡಬೇಕಾಗಿದೆ. ನನಗೆ ತಿಳಿದಮಟ್ಟಿಗೆ ಕೆಲವುಕಡೆ ಜನ ಬಂಜರು ಭೂಮಿಯನ್ನು ಕೂಡ ಕೊಟ್ಟಿದ್ದಾರೆ. ಆದರೂ ಅವರು ಅಭಿನಂದನೆಗೆ ಅರ್ಹರು, ಏಕೆಂದರೆ ಅಷ್ಟರಮಟ್ಟಿಗಾದರೂ 25 ಎಕರೆಯನ್ನು ಕಡಮೆಯಾದರೂ ಮಾಡಿಕೊಂಡು ದೊಡ್ಡ ಜಮೀನುದಾರರು ಸಣ್ಣ ಜಮೀನುದಾರರಾಗುವುದಕ್ಕೆ ಒಪ್ಪಿಕೊಂಡರಲ್ಲ; ಇಷ್ಟರಮಟ್ಟಿಗೆ ಸುಧಾರಣೆ ನಮ್ಮ ದೇಶದಲ್ಲಿ ನಡೆಯಿತು ಅನ್ನುವುದಾದರೂ ಕೂಡ ಸಮಾಧಾನವನ್ನು ಪಡೆದುಕೊಳ್ಳತಕ್ಕ ವಿಷಯ! ಇಂಥ ಕೆಲಸಗಳು ಈ ಭೂದಾನದ ವಿಷಯದಲ್ಲಿ ಹಿಂದೆ ನಡೆದಿವೆ. ಇನ್ನು ಮುಂದಕ್ಕೂ ಇವು ನಡೆಯಲಿಕ್ಕೆ ಸಾಕು. ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಈ ವಿಧೇಯಕವನ್ನು ಚರ್ಚೆ ಮಾಡಬೇಕಾಗಿದೆ.

ಈ ಮೂರನೆಯ ಪ್ರಕರಣದಲ್ಲಿ ಏನು ಒಂದು ಸಮಿತಿಯನ್ನು ಮಾಡಬೇಕೆಂದು ಹೊರಟಿದ್ದೀರೋ ಅದು ತಿಳಿಸಿದಷ್ಟು ಸುಲಭವಾದ ಪ್ರಕರಣವಲ್ಲ. ಈ ಪ್ರಕರಣದ ಬಗ್ಗೆ ನಾವು ಇವತ್ತು ಪುನರ್ವಿಮರ್ಶೆ ಮಾಡಬೇಕಾಗಿದೆ. ನಾಲ್ಕು ಜನ ಏತಕ್ಕೆ ಬೇಕು ಅಥವಾ 9 ಜನರನ್ನು ತೆಗೆದುಕೊಳ್ಳಲು ಏಕೆ ಅವಕಾಶವನ್ನು ಇದರಲ್ಲಿ ಮಾಡಿಕೊಟ್ಟಿದೆ ಅನ್ನುವ ಬಗ್ಗೆ ಮಾನ್ಯ ಸಚಿವರು ಈ ಸಭೆಗೆ ಸಾಕಾದಷ್ಟು ಸಮಜಾಯಿಷಿಯನ್ನು ಕೊಡಬೇಕಾಗುತ್ತದೆ. ಈ ಅಧ್ಯಕ್ಷರಿಗೆ, ಪಾಪ, ಬೆಂಗಳೂರಿನಲ್ಲಿ ಆಫೀಸು ಬೇಕು. ಅಧ್ಯಕ್ಷರಿಗೆ ಬೆಂಗಳೂರಿನಲ್ಲಿ ಆಫೀಸು ಮಾಡಿದರೆ ಅವರಿಗೆ ಬೆಂಗಳೂರಿನಲ್ಲಿ ಬಂಗಲೆ ಸಹ ಬೇಕು. ಕೆಲವು ಮಂತ್ರಿಗಳಿಗೆ ಕೊಟ್ಟಿರತಕ್ಕಂಥ ಬಂಗಲೆ ಕೊಡದೆಹೋದರೂ, ಲೆಜಿಸ್ಲೇಟರ್ ಹೋಮಿನಲ್ಲಿಯಾದರೂ ಒಂದು ರೂಮನ್ನು ಕೊಡಬೇಕಾಗುತ್ತದೆ. ಏಕೆಂದರೆ ಅವರಿಗೂ ಸಂಸಾರ ಇರುತ್ತದೆ, ಅದು ಸಾಧು ಸಮಾಜವಲ್ಲ. ಅವರ ಸಂಸಾರ, ಅವರ ಮಕ್ಕಳ ವಿದ್ಯಾಭ್ಯಾಸ ಇವೆಲ್ಲಾ ನಡೆಯಬೇಕಾಗುತ್ತದೆ. ಈಗ ಬೇಕಾದಷ್ಟು ಸಮಿತಿಯ ಅಧ್ಯಕ್ಷರಿಗೆ ನಾವು ಆ ರೀತಿಯ ಅವಕಾಶಗಳನ್ನು ಮಾಡಿಕೊಟ್ಟಿದ್ದೇವೆ; ಅದು ಈ ಸಭೆಯಲ್ಲಿ ಬಹಳಮಟ್ಟಿಗೆ ಟೀಕೆಗೆ ಬಂದಿದೆ. ಮತ್ತು ಅವರಿಗೆ ಆನರೋರಿಯಮ್ ಕೊಡಬೇಕಾಗುತ್ತದೆ. ಈಗ ಕೆಲವು ಕೋ-ಅಪರೇಟಿವ್ ಬ್ಯಾಂಕುಗಳಲ್ಲಿ, ಅಪೆಕ್ಸ್ ಬ್ಯಾಂಕಿನಲ್ಲಿ, ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕಿನಲ್ಲಿ, ಕೋ-ಅಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಅಧ್ಯಕ್ಷರಿಗೆ ಸಂಬಳ ಕೊಡುತ್ತಾ ಇಲ್ಲ. ಈ ಎಲ್ಲಾ ಅಧ್ಯಕ್ಷರುಗಳು ಸಹಕಾರ ಕ್ಷೇತ್ರದಲ್ಲಿ ಒಳ್ಳೆಯ ಜ್ಞಾನವನ್ನು ಸಂಪಾದನೆ ಮಾಡಿದ್ದಾರೆ, ಸಹಕಾರ ಕ್ಷೇತ್ರದಲ್ಲಿ ಒಳ್ಳೆಯ ಅನುಭವ ಪಡೆದುಕೊಂಡಿದ್ದಾರೆ. ಆ ಅನುಭವ ಇರುವುದರಿಂದಲೆ ಅವರಿಗೆ ಆಡಳಿತ ಜವಾಬ್ದಾರಿಗಳನ್ನು

(ಶ್ರೀ ಎಸ್. ಎಂ. ಕೃಷ್ಣ)

ಒದಗಿಸಿದೆ. ಆ ಜವಾಬ್ದಾರಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವುದಕ್ಕೋಸ್ಕರವಾಗಿ ಈ ಆನರೋರಿಯಮ್ ಕೊಡಬೇಕಾಗುತ್ತದೆ. ಅವರಿಗೆ ಓಡಾಡುವುದಕ್ಕೆ ಕನ್‌ವೆಯನ್ಸ್ ಅಲೋಯನ್ಸ್ ಕೊಡುತ್ತಿದೆ— ಬಹುಶಃ 450 ರೂಪಾಯಿ ಕೊಡುತ್ತಿದ್ದಾರೆ. ಇವರಿಗೂ 450 ಅಥವಾ 250 ರೂಪಾಯಿ ಟಿ ಎ. ಕೊಡಬೇಕಾಗುತ್ತದೆ. ಭೂದಾನ ಬೋರ್ಡಿನ ಅನ್ವಯ ಮೈಸೂರು ರಾಜ್ಯದಲ್ಲಿ ಎಲ್ಲಾ ದಿಕ್ಕಿನಲ್ಲಿ ಕೂಡ ಇರುತ್ತದೆ. ಚಿಕ್ಕಮಗಳೂರಿನಲ್ಲಿರುತ್ತದೆ, ಗುಲ್ಬರ್ಗದಲ್ಲಿರುತ್ತದೆ, ಮಂಡ್ಯ ಜಿಲ್ಲೆಯಲ್ಲಿ ಇರುತ್ತದೆ. ಅಧ್ಯಕ್ಷರು ಬೆಂಗಳೂರಿನಲ್ಲಿಯೇ ಕುಳಿತಿರುವುದಕ್ಕೆ ಆಗುವುದಿಲ್ಲ. ಸಂಸ್ಥಾನಾದ್ಯಂತ ಪ್ರವಾಸ ಹೋಗಬೇಕಾಗುತ್ತದೆ. ಅದಕ್ಕೋಸ್ಕರ ಈ ವಿಧೇಯಕದಲ್ಲಿ ಮುಂದೆ ಒಂದು ಸೆಕ್ಷನ್ನಿನಲ್ಲಿ ಬೋರ್ಡಿಗೆ ಬೇಕಾದಂಥ ಎಲ್ಲ ಸಿಬ್ಬಂದಿಯನ್ನು ಕೂಡ ಆ ಬೋರ್ಡು ನೇಮಿಸಿಕೊಳ್ಳಬಹುದು ಮತ್ತು ಅದಕ್ಕೆ ಬೇಕಾದ ಖರ್ಚನ್ನು ಕೂಡ ಆ ಬೋರ್ಡೇ ಸಂಪಾದನೆ ಮಾಡಿಕೊಂಡು, ಆ ಹಣದಿಂದ ಖರ್ಚು ನೀಗಿಸಿಕೊಳ್ಳಬೇಕು ಅನ್ನತಕ್ಕಂಥ ಮಾತನ್ನು ಕೂಡ ಕೊಟ್ಟಿದ್ದಾರೆ. ಅಂದಮೇಲೆ ಈ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಪ್ರಬಲವಾದಂಥ ಪೈಪೋಟಿ ನಡೆಯುತ್ತದೆ ಅನ್ನತಕ್ಕಂಥದ್ದನ್ನು ನಾನು ಬಹು ಚೆನ್ನಾಗಿ ಬಲ್ಲೆ. ಮಾನ್ಯ ಮಂತ್ರಿಗಳು ಇದರಿಂದಾಗಿ ಅನುಭವಿಸಬೇಕಾದ ಸಂಕಟವನ್ನು ಈಗಲೆ ನೆನೆಸಿಕೊಳ್ಳುವುದು ಒಳ್ಳೆಯದು. ಅವರು ಹುಸಿನಗೆಯನ್ನು ನಗುತ್ತಾ ಇದ್ದಾರೆ.

ಇನ್ನು ಈ ಸಲಹಾ ಸಮಿತಿ ಮತ್ತು ಅದರ ಕಾರ್ಯಕ್ಷೇತ್ರವನ್ನು ಕೂಡ ಈ ವಿಧೇಯಕದಲ್ಲಿ ನಮೂದು ಮಾಡಿದ್ದಾರೆ. ಒಂದು ಪಕ್ಷ ನಾವು ಪಡದಿರತಕ್ಕ ಭೂಮಿಯನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡುವ ದೃಷ್ಟಿಯಿಂದ, ಇಂಥ ಒಂದು ವಿಧೇಯಕದ ಮೂಲಕ ಮಾಡಬೇಕು ಎನ್ನುವ ದೃಷ್ಟಿಯಿಂದ ಇದ್ದಿದ್ದರೆ ಈ ಕಮಿಟಿಗೆ ಬದಲಾಗಿ, ಸಲಹಾ ಸಮಿತಿಗೆ ಬದಲಾಗಿ ಯಾರಾದರೂ ಒಬ್ಬ ಭೂದಾನ ಕಾರ್ಯಕರ್ತರನ್ನೊಬ್ಬರನ್ನು ಸರ್ಕಾರದವರು ಇಡೀ ಸಂಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಕನ್‌ವೀನರ್ ರೀತಿಯಲ್ಲಿ ಮಾಡಿ ಅವರ ಮೂಲಕ ಮತ್ತು ಅವರೇ ಸ್ವಂತವಾಗಿ ನೇಮಿಸಿಕೊಳ್ಳತಕ್ಕ ಸಮಿತಿಯ ಮೂಲಕ ಆಗಬಹುದಾಗಿತ್ತು ಎಂದು ನಾವಾದರೂ ಕೂಡ ಅಭಿಪ್ರಾಯ ಪಡುತ್ತೇವೆ. ವಿನೋಭಾಜಿಯವರು ಕೂಡ ಸರ್ಕಾರದ ಮೂಲಕ ಈ ಭೂಮಿಯ ವಿತರಣೆ ಮಾಡಬೇಕೆನ್ನುವ ವಿಷಯವನ್ನು ಖಂಡಿತವಾಗಿಯೂ ಒಪ್ಪುವುದಿಲ್ಲವೆನ್ನುವ ಮಾತನ್ನು ನಾವು ನೆನಪಿನಲ್ಲಿಡಬೇಕಾಗುತ್ತದೆ. ಇದು ಒಂದು ವಾಲಂಟರಿ ಮೂವ್‌ಮೆಂಟ್. ಈ ಒಂದು ಯೋಜನೆ ಕಾರ್ಯರೂಪಕ್ಕೆ ಬರಬೇಕಾದರೆ ಮತ್ತು ಯಶಸ್ವಿಯಾಗಬೇಕಾದರೆ ಭೂದಾನಕ್ಕೋಸ್ಕರ ತಮ್ಮ ಜೀವನವನ್ನೇ ದಾನ ಮಾಡಿರತಕ್ಕ ನೂರಾರು ಸಹಸ್ರಾರು ಮಂದಿ ಸಹಾಯಕರ ಮತ್ತು ಅವರ ಕಾರ್ಯತತ್ಪರತೆ ಇವುಗಳಿಂದ ಮಾತ್ರ ಈ ಕೆಲಸ ಯಶಸ್ವಿಯಾಗಬೇಕು. ಅದಿಲ್ಲದೆ ನಾವು ಕಾನೂನು ಮೂಲಕ ಕೆಲಸವನ್ನು ಸಾಧನೆ ಮಾಡುತ್ತೇವೆಂದು ಹೊರಟರತಕ್ಕ ರೀತಿ ನಮ್ಮೆಲ್ಲರಿಗೂ ಕೂಡ, ಕೆಲವರಿಗಂತೂ ಕೂಡ ಬಹಳ ಆಶ್ಚರ್ಯವನ್ನುಂಟುಮಾಡಿದೆ.

3-30 P.M.

11ನೆಯ ಪ್ರಕರಣದಲ್ಲಿ ಸಲಹಾ ಸಮಿತಿಗೆ ಹಣವನ್ನು ಸಂಸ್ಥಾನ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಅಥವಾ ಸ್ಥಳೀಯ ಸಂಸ್ಥೆಗಳಾಗಲೀ ಯಾರು ಕೊಟ್ಟರೂ ದಾನವಾಗಿ ಸ್ವೀಕಾರ ಮಾಡಬಹುದು ಮತ್ತು ಈ ಭೂಧಾನ, ಧ್ಯೇಯ ಮತ್ತು ಉದ್ದೇಶಗಳಿಗೆ ಆ ಹಣವನ್ನು ಖರ್ಚು ಮಾಡಬಹುದು ಎಂದು ನಮೂದು ಮಾಡಿದ್ದಾರೆ. ಒಂದು ಪಕ್ಷ ಕೇಂದ್ರ ಸರ್ಕಾರವೇ ಆಗಲೀ, ರಾಜ್ಯ ಸರ್ಕಾರವೇ ಆಗಲೀ ಇದಕ್ಕೆ ಹಣವನ್ನು ಒದಗಿಸುವುದು ಬೇಡವೆನ್ನುವ ಅಭಿಪ್ರಾಯಪಟ್ಟರೆ ಅಥವಾ ಸಾಕಾದಷ್ಟು ಮಂದಿ ಸಾರ್ವಜನಿಕರು ಹಣವನ್ನು ಇದಕ್ಕೋಸ್ಕರ ವಿನಿಯೋಗಿಸುವುದಕ್ಕೆ ಮನಸ್ಸು ಮಾಡದೆ ಹೋದರೆ ಈ ಬೋರ್ಡಿನ ಗತಿ ಏನು ಎನ್ನುವುದನ್ನು ಕೂಡ ಸರ್ಕಾರದವರು ಆಲೋಚನೆ ಮಾಡಬೇಕಾಗಿದೆ.

"The Board shall have its own fund..."

ಬಹಳ ಸಂತೋಷ.

If in case it is not possible for the Board to create a fund of its own, what should be the future of this Board? How is it possible for the Board to fulfil certain of the obligations that vest in the Board?

ಇದನ್ನು ಕೂಡ ಸರ್ಕಾರದವರು ಯೋಚನೆ ಮಾಡುವ ರೀತಿಯಲ್ಲಿ ನನಗೆ ಕಾಣುವುದಿಲ್ಲ. ಅದಕ್ಕೆ ಯಾವಾಗ ನೀವು ಹಣವನ್ನು ಕೊಡುತ್ತೀರಿ ಆ ಹಣದ ಬಗ್ಗೆ ಸರಿಯಾದ ಲೆಕ್ಕಾಚಾರಗಳನ್ನು ಇಡುವುದಕ್ಕೆ ಸಾಕಾದಷ್ಟು ಸಿಬ್ಬಂದಿಯ ಅವಶ್ಯಕತೆ ಕೂಡ ಬಹುಮಟ್ಟಿಗೆ ಬೇಕಾಗುತ್ತದೆ. ಇಲ್ಲದೆ ಹೋದರೆ ಭೂದಾನ ಬೋರ್ಡ್ ಕೂಡ, ಖಾದಿ ಬೋರ್ಡ್ ಯಾವ ಮಾದರಿ ಹೊರಟುಹೋಯಿತೋ ಅದೇ ಮಾದರಿಯಲ್ಲಿ ಹೋಗುವುದರಲ್ಲಿ ನನಗಂತೂ ಲೇಶ ಮಾತ್ರವೂ ಸಂಶಯವಿಲ್ಲವೆಂದು ಹೇಳುತ್ತೇನೆ. ಬಹು ವ್ಯಂಗ್ಯವಾಗಿ ಭೂದಾನ ಹೆಗ್ಗಣ ಎಂದು ಮಾನ್ಯ ಮಂತ್ರಿಗಳು ಹೇಳಿದರು......

ಶ್ರೀ ಎಂ. ವಿ. ಕೃಷ್ಣಪ್ಪ.—ರೈತ ತನ್ನ ಭಾಷೆಯಲ್ಲಿ ಸರಿಯಾಗಿ ಹೇಳುವುದಕ್ಕೆ ಬಾರದೆ ಆ ರೀತಿ ಹೇಳುತ್ತಾನೆಂದು ತಿಳಿಸಿದೆ. ಅದು ನನ್ನ ಅಭಿಪ್ರಾಯವಲ್ಲ.

ಶ್ರೀ ಎಸ್. ಎಂ. ಕೃಷ್ಣ.—ರೈತಾಪಿ ಭಾಷೆಯಲ್ಲಿ ಹಾಗೆ ಹೇಳಬಹುದು—ಮಾನ್ಯ ಸಚಿವರು ಯಾವಾಗಲೂ ರೈತಾಪಿ ಜನರನ್ನು ಪ್ರತಿನಿಧಿಸುವುದರಲ್ಲಿ ಮತ್ತು ಆ ರೈತಾಪಿ ಜನರನ್ನು ಪ್ರತಿಬಿಂಬಿಸುವುದರಲ್ಲಿ ಕೂಡ ಬಹು ಅಗ್ರಗಣ್ಯರು. ಯಜ್ಞ ಎನ್ನುವುದು ಬಹಳ ಕಷ್ಟವಾದ ಪದ. ಗೆಳೆಯ ಗೋಪಾಲಗೌಡರು ಮಾತ್ರ ಅದನ್ನು ಸರಿಯಾದ ರೀತಿಯಲ್ಲಿ ಹೇಳುವುದಕ್ಕೆ ಶಕ್ಯರು. ನಮ್ಮಲ್ಲಿ ಕೆಲವರಿಗೆ 'ಅ' ಕಾರ 'ಹ' ಕಾರಗಳನ್ನು, ಆಂಗ್ಲ ಪದವನ್ನು ಉಚ್ಚರಿಸತಕ್ಕ ನಾಲಗಗೆ ಕೊಂಚ ಕಷ್ಟವಾಗುತ್ತದೆ. ಅವರೂ ಆ ರೀತಿಯಲ್ಲಿ ತಪ್ಪು ಮಾಡುತ್ತಾರೆ. ಒಂದು ಪಕ್ಷ ಈ ಸಭೆಯಲ್ಲಿ ಹೇಳತಕ್ಕ ಟೀಕೆಗಳನ್ನು ನೀವು ಗಮನಿಸದೆ ಹೋದರೆ, ಈ ಭೂದಾನ ಸಮಿತಿ, ಭೂದಾನ ಬೋರ್ಡ್ ಏನಿದೆ ಅದು ಹೆಗ್ಗಣಗಳಿಗೆ ಆಶ್ರಯ ಸ್ಥಾನವಾಗಬಹುದು ಎನ್ನುವ ಶಂಕೆಯನ್ನು ಈ ದಿವಸ ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಹಿಂದೆ ನಡೆದಿರತಕ್ಕ ಕೆಲಸಕಾರ್ಯಗಳನ್ನು ನೋಡಿದರೆ, ಅದನ್ನು ಅಳತೆ ಗೋಲಾಗಿಟ್ಟುಕೊಂಡು ನೋಡಿದರೆ–ಯಾರೂ ಕೂಡ ಇದನ್ನು ಅನ್ಯಾಥಾ ಭಾವಿಸಬಾರದು–ಖಾದಿ ಬೋರ್ಡ್ ಮತ್ತು ಇನ್ನು ಕೆಲವು ಬೋರ್ಡ್‌ಗಳು, ನೀವೇ ಸೃಷ್ಟಿ ಮಾಡಿಸಿರತಕ್ಕ ಬೋರ್ಡ್‌ಗಳು ಇವುಗಳು ನಡೆದಿರುವ ರೀತಿನೀತಿಗಳನ್ನು ನೋಡಿದರೆ ಇದರಲ್ಲಿ ಕೂಡ ಸಾಕಾದಷ್ಟು ಸೇಫ್ಟಿ ಕ್ರಮಗಳನ್ನು ಸಕಾಲದಲ್ಲಿ ಕೈಕೊಳ್ಳದೆ ಹೋದರೆ ಈ ಬೋರ್ಡ್ ಕೂಡ ಆ ಬೋರ್ಡ್‌ಗಳಂತೆಯೇ ಬಿದ್ದುಹೋಗಿ ಅದೇ ರೀತಿ ಇದೂ ಕೂಡ ಆಗಬಹುದು ಎನ್ನುವ ಸಂಶಯವನ್ನು ನಾನು ಮತ್ತೆ ವ್ಯಕ್ತಪಡಿಸಬೇಕಾಗಿದೆ. ಈ ದೃಷ್ಟಿಯಿಂದಲೂ ಸರ್ಕಾರದವರು ಈ ವಿಧೇಯಕದ ಬಗ್ಗೆ ಕೊಂಚ ಪುನರ್ವಿಮರ್ಶೆ ಮಾಡಬೇಕಾಗಿದೆ.

17ನೆಯ ಕ್ಲಾಜಿನಲ್ಲಿ "Disposed of Land vesting in the Board" ವಿಷಯವಿದೆ. ಇದೂ ಕೂಡ ಬಹಳ ನಾಚಿಕೆಯ ಕೆಲಸ. ಈ ವಿಧೇಯಕವನ್ನು ನಾವು ಅಂಗೀಕರಿಸುವುದರಿಂದ ಒಂದು ಜಾತಿಯ ಜನಕ್ಕೆ ಅನುಕೂಲವಾಗುತ್ತದೆ. ಒಂದು ಜಾತಿಯ ಜನ ಎಂದರೆ ಲಾಯರುಗಳು. ಅವರಿಗೆ ಕೊಂಚಮಟ್ಟಿಗೆ ಇದರಿಂದ ಅನುಕೂಲವಾಗಬಹುದೇನೋ ಎಂದು ನನಗನ್ನಿಸುತ್ತದೆ. ಬೋರ್ಡಿನವರು ಮಾಡುವ ತೀರ್ಮಾನಕ್ಕೆ ಮೊದಲು ಇಂಥ ಮನುಷ್ಯ ಈ ಜಮೀನನ್ನು ಭೂದಾನಕ್ಕೆ ಕೊಟ್ಟಿದ್ದಾನೆ, ಅವನಿಗೆ ಅರ್ಹತೆ ಇದೆಯೇ, ಅವನಿಗೆ ಹಕ್ಕಿದೆಯೇ, ಅವನಿಂದ ಸಂಪಾದನೆಯಾಗಿದೆಯೇ ಎಂಬ ಎಲ್ಲ ವಿಚಾರಗಳ ಬಗ್ಗೆ ರೆವೆನ್ಯೂ ಅಧಿಕಾರಿಯು ಒಂದು ತೀರ್ಮಾನವನ್ನು ಕೊಡುತ್ತಾನೆ. ಅದರ ಬಗ್ಗೆ ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್ ಇವರಿಗೆ ಅಪೀಲು ಹೋಗುವುದಕ್ಕೆ ಅವಕಾಶವನ್ನು ಈ ವಿಧೇಯಕದಲ್ಲಿ ಮಾಡಿಕೊಟ್ಟಿದ್ದಾರೆ. ನಾನೂ ವೃತ್ತಿಯಲ್ಲಿ ವಕೀಲ, ನನಗೂ ಕೂಡ ನಾಲ್ಕು ಕಾಸು ರೈತರಿಂದ ಸಂಪಾದನೆಯಾಗಬೇಕು; ನಾಲ್ಕಾರು ಜನ clients ಬಂದು ಅದರ ಬಗ್ಗೆ ವ್ಯವಹಾರ ನಡೆಸಬೇಕು. ಆದರೆ ಇಂಥ ಅವಕಾಶವನ್ನು ನಾವು ಲಾಯರುಗಳಿಗೆ ಮಾಡಿಕೊಡುವುದೇ ವಿನೋಭಾಜಿಯವರ ಧ್ಯೇಯವೇ, ಉದ್ದೇಶವೇ ಎನ್ನುವುದನ್ನು ಕೂಡ ನಾವು ಯೋಚನೆ ಮಾಡಬೇಕು.

ನಮ್ಮಲ್ಲಿ ಒಳಗೆ ಉಂಟಾಗಿರತಕ್ಕ ಹಲವಾರು ಅಭಿಪ್ರಾಯಗಳನ್ನು ಯಾವುದಾದರೂ ಒಂದು ರೀತಿಯಲ್ಲಿ ಪ್ರತಿಬಿಂಬಿಸುತ್ತೇವೆ. ಏನಾದರೂ ಕೆಲಸ ಮಾಡಬೇಕಾದರೂ ಸರ್ಕಾರದವರೇ ಮಾಡಬೇಕು, ಸರ್ಕಾರದ ಮುಖಾಂತರವೇ ನಡೆಯಬೇಕು ಮತ್ತು ಸರ್ಕಾರದ ಕೃಪಾ ಛತ್ರದಲ್ಲಿ ನಡೆಯಬೇಕು ಎನ್ನುವ ಮನೋಭಾವನೆ ಒಂದು ಕಾಲದಲ್ಲಿ ಈ ದೇಶದಲ್ಲಿತ್ತು. ಹಲವಾರು ಜನ ಮಂತ್ರಿಗಳು ಹಳ್ಳಿಗಾಡಿಗೆ ಹೋದಾಗ ಹೇಳುತ್ತಾರೆ: ಸರ್ಕಾರದ ಮೇಲೆ ಅವಲಂಬಿಸಿರಬಾರದು, ನಿಮ್ಮ ಕೆಲಸವನ್ನು ನೀವೇ ಮಾಡಿಕೊಳ್ಳಬೇಕು, ನಿಮ್ಮ ಕುಡಿಯುವ ನೀರಿನ ಭಾವಿಯನ್ನು ನೀವೇ ತೆಗೆಸಿಕೊಳ್ಳಿ ಎಂದು ಶ್ರೀಮಾನ್ ಪುಟ್ಟಸ್ವಾಮಿಯವರು ಹೋದ ಕಡೆಗಳಲ್ಲೆಲ್ಲಾ ಭಾಷಣ, (Interruption) ಶ್ರೀ ರೇವಣ್ಣಸಿದ್ದಪ್ಪನವರು ಹೇಳುವಂತೆ ನಿಮ್ಮ ಗುಂಡಿಯನ್ನು ನೀವೇ ತೆಗೆಯಬೇಕು ಎಂದೂ ಹೇಳುತ್ತಾರೆ. ಈ ವಿಧೇಯಕದ ಬಗ್ಗೆಯೂ ಕೂಡ ಅದೇ ನಿಲುವನ್ನು ಏಕೆ ತೆಗೆದುಕೊಳ್ಳಲಿಲ್ಲ ಎಂದು ನಾವು ಕೇಳಬೇಕಾಗಿದೆ. ಈ ಒಂದು ಪ್ರಸ್ತಾಪದ ಬಗ್ಗೆ ನಾನು ಮತ್ತೆ ಸಚಿವರ ಗಮನವನ್ನು

(ಶ್ರೀ ಎಸ್. ಎಂ. ಕೃಷ್ಣ)

ಕೇಳಿಯುತ್ತೇನೆ. ಇಂಥ ಒಂದು ವಿಧೇಯಕವನ್ನು ವಿನೋಭಾಜಿಯವರು ಒಪ್ಪಿದಾರೆಯೋ, ವಿನೋಭಾಜಿಯವರು ಇಂಥ ವಿಧೇಯಕ ಇರಬೇಕೆಂದು ಮನ್ನಣೆ ಮಾಡಿಕೊಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದರೆ ಬಹುಶಃ ಏನು ಚರ್ಚೆ ಮಾಡುವುದಕ್ಕೆ ಹೊರಟಿದ್ದೇವೆಯೋ ಆ ಚರ್ಚೆ ಸುಲಲಿತವಾಗಿರುತ್ತದೆ, ಅದು ಅರ್ಥಗರ್ಭಿತವಾಗಿರುತ್ತದೆಂದು ನಾನು ಭಾವನೆ ಮಾಡುತ್ತೇನೆ.

ಇನ್ನು ಜಮೀನನ್ನು ಹಂಚುವ ಬಗ್ಗೆ ಏಳು ದಿವಸಕ್ಕೆ ಮೊದಲು ಆ ಊರಿನಲ್ಲಿ ಡಂಗುರ ಹೊಡೆಸ ಬೇಕು. ಮತ್ತು ಇದೇ ರೀತಿ ಯಾವ ದಿವಸ ಈ ಭೂ ವಿತರಣೆ ನಡೆಯುತ್ತದೆಯೋ ಆವತ್ತಿನ ವೇಳೆಗೆಯೂ ಕೂಡ ಅಲ್ಲಿ ಒಂದು ರೀತಿ ಸಾರಿಸಿ ಆ ಊರಿನಲ್ಲಿರತಕ್ಕ ಎಲ್ಲಾ ಭೂ ವಿಹೀನರನ್ನೂ ಕೂಡ ಅಲ್ಲಿ ಜೋಡಿಸಿ ಕರೆಸಿಕೊಳ್ಳಬೇಕು.

"No allotment shall be valid unless either one-third of the total number of landless families in the village or double the number of persons to whom allotments can be made whichever is less, are present in the meeting,"

ಇದರ ಸಾಧ್ಯಾಸಾಧ್ಯತೆಗಳನ್ನು ಸರ್ಕಾರದವರು ಆಲೋಚಿಸಿದ ಹಾಗೆ ಕಾಣಲಿಲ್ಲ. ಆಗ ಆ ಊರಿನಲ್ಲಿ ಎಷ್ಟು ಜನ ಭೂಮಿ ಇಲ್ಲದೇ ಇರತಕ್ಕ ಜನ ಇದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ಆಗ ನೀವು ಕುಟುಂಬವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಾ ಅಥವಾ ಅವಿಭಕ್ತ ಕುಟುಂಬವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೀರಾ ಅಥವಾ ಪ್ರತಿಯೊಬ್ಬನೂ ಕೂಡ ನನಗೆ ಭೂಮಿ ಇಲ್ಲ ಎನ್ನುವುದಾದರೆ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ನೂರಾರು ಜನ ಸಿಕ್ಕುತ್ತಾರೆ — ಮೈಸೂರು ರಾಜ್ಯದಲ್ಲಿ ಎಷ್ಟು ಹಳ್ಳಿಗಳಿವೆ, ಇದುವರೆಗೂ ದೊರೆಕಿಸಿಕೊಂಡಿರತಕ್ಕ 20 ಸಾವಿರ ಎಕರೆಗಳನ್ನು ಹಂಚಲು ಎಷ್ಟು ಮಟ್ಟಿಗೆ ಸಾಕಾಗುತ್ತದೆ ಎನ್ನುವುದನ್ನೂ ಕೂಡ ಆಲೋಚನೆ ಮಾಡಬೇಕಾಗಿದೆ. ಎಂದರೆ ಎಲ್ಲರಿಗೂ ಸಾಕಾಗಬೇಕೆಂಬ ನಿಯಮ ಇಲ್ಲ. ಇದು ದಾನವಾಗಿ ಬಂದಿರತಕ್ಕ ಒಂದು ವಸ್ತು ಆದ್ದರಿಂದ ಈ ರೀತಿಯಲ್ಲಿ ನೋಡಿಕೊಳ್ಳಬೇಕಾಗಿದೆ.

"ordinarily at least one third of the allotments of lands shall be in favour of members of the Scheduled Castes,"

"(iv) the selection of persons to whom allotments are to be made shall be made unanimously by all the landless persons present at the meeting and if they cannot agree, by lots drawn from among persons unanimously nominated by them."

17ನೇ ಪ್ರಕರಣದಲ್ಲಿ ಏನು ನಮೂದು ಮಾಡಿದ್ದಾರೆ ಅವುಗಳೆಲ್ಲವನ್ನೂ ಕೂಡ ಕಾರ್ಯರೂಪಕ್ಕೆ ತರುವುದಕ್ಕೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಯಾರಾದರೂ ಆಲೋಚನೆ ಮಾಡಿದ್ದೀರಾ ಎಂಬ ಪ್ರಶ್ನೆಯನ್ನು ನಾವು ಕೇಳಬೇಕಾಗುತ್ತದೆ. 7 ದಿವಸಕ್ಕೆ ಮೊದಲೇ ಹೋಗಬೇಕು ಅಲ್ಲಿ ಆ ಊರಿನ ಜನರಿಗೆ ಪ್ರಚುರಪಡಿಸಬೇಕು, ಅನಂತರ ಜನಗಳಿಗೆ ಜಮೀನನ್ನು ಹಂಚಬೇಕಾದರೆ ಓಟು ತೆಗೆದುಕೊಳ್ಳಬೇಕು — ಯೂನಾನಿಮಸ್ ಆಗಿರಬೇಕು — ಅವರು ತೀರ್ಮಾನ ಮಾಡಬಹುದು. ಯಾವ ಊರಿನಲ್ಲಿ ಸರ್ವಸಮ್ಮತ ಅಭಿಪ್ರಾಯ ದೊರಕುತ್ತದೆ ? ಏಕೆಂದರೆ ನಮ್ಮ ದೇಶದಲ್ಲಿ ಇವತ್ತು ಜೀವನ ರಾಜಕೀಯವಾಗಿ ಮತ್ತು ಆರ್ಥಿಕವಾಗಿ It is the survival of the fittest ಯಾರು ಬಲಾಢ್ಯನಾಗಿ ಇರುತ್ತಾನೆಯೋ ಅವನಿಗೆ ಅನುಕೂಲ. ಗಾಂಧಿಜಿಯವರು ಹೇಳಿದಂತೆ ಧರ್ಮದ ದಾರಿಯನ್ನು ಬಿಟ್ಟು ಬಹಳ ದಿವಸ ಆಯಿತು—ಒಂದು ಕೆಲಸವನ್ನು ನಡೆಸಬೇಕಾದರೆ ಒಂದು ಧ್ಯೇಯವನ್ನು ಸಾಧನೆ ಮಾಡಬೇಕಾದರೆ ಧರ್ಮದ ದಾರಿಯನ್ನು ಹಿಡಿಯಬೇಕೆಂದು ಮಹಾತ್ಮ ಗಾಂಧಿಜಿಯವರು ಉಪದೇಶ ಮಾಡಿ ಹೋದರು — ಈ ದಿವಸ ಎಷ್ಟೋ ಜನ ಧರ್ಮದ ದಾರಿಯನ್ನು ಬಿಡುವುದಕ್ಕೆ ಸಿದ್ಧವಾಗಿದ್ದೇವೆ ಎಂಬುದನ್ನು ನಾವೆಲ್ಲಾ ನೋಡಿದ್ದೇವೆ ; ಕೆಲವರು ಚುನಾವಣೆಗಳಲ್ಲಿ ಭ್ರಷ್ಟಾಚಾರವನ್ನೂ ಕೂಡ ಮಾಡಿ ಈ ಸಭೆಯಲ್ಲಿ ಬಂದು ಕುಳಿತಿದ್ದಾರೆ ಎಂಬುದನ್ನು ನಾವು ಕಂಡಿದ್ದೇವೆ. ಎಂದ ಮೇಲೆ ಇವತ್ತು ನಾವು ಹಳ್ಳಿಗಳಲ್ಲಿ ಹೋದರೆ ಒಬ್ಬ ಬಹಿಷ್ಕೃತ ಎಷ್ಟುಮಟ್ಟಿಗೆ ತನ್ನ ಸರ್ವಸಮ್ಮತವಾದ ಅಭಿಪ್ರಾಯವನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು.

Sri N. HUCHAMASTI GOWDA (Chandrasekarapura).—On a point of order. ಭ್ರಷ್ಟಾಚಾರ ಮಾಡಿ ಈ ಸಭೆಯಲ್ಲಿ ಅನೇಕರು ಬಂದು ಸದಸ್ಯರಾಗಿ ಕುಳಿತಿದ್ದಾರೆ ಎಂದು ಹೇಳುವುದು ಈ ಸಭೆಯ ಗೌರವಕ್ಕೆ ತಕ್ಕುದಲ್ಲ. ಇದನ್ನು ಪ್ರೊಸೀಡಿಂಗ್ಸ್‌ನಿಂದ ತೆಗೆದು ಹಾಕುವಂತೆ ನಾವು ಅಪ್ಪಣೆ ಮಾಡಬೇಕು ಮತ್ತು ಅವರು ಅದನ್ನು ವಾಪಸು ತೆಗೆದುಕೊಳ್ಳಬೇಕು.

Mr. SPEAKER.—He says that it is unparliamentary. Does the Hon. Member say that it is parliamentary ?

Sri S. M. KRISHNA.—I submit that it is not unparliamentary.

Mr. SPEAKER.—It is vague and indefinite. It is so uncertain that it is not clear what he means by " brashtachara".

ಶ್ರೀ ಎಸ್. ಎಂ. ಕೃಷ್ಣ.—ಆದ್ದರಿಂದ ಈ ಒಂದು ರೀತಿಯಲ್ಲಿ ಚುನಾವಣೆಯನ್ನು ನಡೆಸಿದ್ದಾರೆ. ಅದಕ್ಕೇ ಈಗ ಏನು ಮಾಡಬೇಕಾಗುತ್ತದೆ ? ಭೂಮಿ ಬೇಕು ಎಂದು ಇಷ್ಟಪಟ್ಟಿರತಕ್ಕ ಜನ ಕ್ಯಾನ್‌ವಾಸ್ ಮಾಡಬೇಕಾಗುತ್ತದೆ. ನಾಳೆ ಭೂದಾನದ ಅಧ್ಯಕ್ಷರು ಬರುತ್ತಾರೆ ಆಗ ಕೇಳುತ್ತಾರೆ 'ತಿಮ್ಮಪ್ಪನಿಗೆ' ಎಷ್ಟು ಜನ ಭೂ ವಿಹೀನರು ಓಟು ಮಾಡುತ್ತೀರಿ ಎಂದು ಆಗ ನೀವೆಲ್ಲರೂ ಅವನಿಗೇ ಕೊಡಬೇಕು ಎಂದು ಹೇಳುವ ರೀತಿಯಲ್ಲಿ ಕ್ಯಾನ್‌ವಾಸ್ ನಡೆಯುತ್ತದೆ. ಹಾಗೆ ನಡೆಯುವುದಿಲ್ಲ ಎಂದು ನಾವು ಯಾರೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇಂಥ ಬ್ರಹ್ಮಾತ್ಮಕ ವಿಧಿಗಳನ್ನು ಈ ಕಾನೂನಿನಲ್ಲಿ ಏಕೆ ಸೇರಿಸಿದ್ದಾರೆ ಎಂದು ನಾನು ಮಾನ್ಯ ಸಚಿವರಿಗೆ ಪ್ರಶ್ನೆಮಾಡುತ್ತೇನೆ.
ಇನ್ನೂ ಹೊಸ ರೀತಿಯಲ್ಲಿ ಒಂದು ವ್ಯಾಖ್ಯಾನವನ್ನು 22ನೇ ಪ್ರಕರಣದಲ್ಲಿ ನೋಡುತ್ತೇವೆ. ಈಗಾಗಲೇ ನಾವು ಈ ಭೂಮಿಯನ್ನು ವಿತರಣೆ ಮಾಡತಕ್ಕ ರೀತಿ ಮತ್ತು ಉಳುವವನಿಗೇ ಭೂಮಿ ಎನ್ನತಕ್ಕ ತತ್ವವನ್ನು ಒಪ್ಪಿದ್ದೇನೆ. ಇದರಲ್ಲಿ ಈಗ ಬೇಕಾದಷ್ಟು ಜನ ಟೆನೆಂಟುಗಳನ್ನು ಸೃಷ್ಟಿ ಮಾಡಿದ್ದೀರಿ ಬಾಯಂ ಟೆನೆಂಟು ಇಂಥಾದ್ದೆಲ್ಲಾ ಇದೆ : 22ನೇ ಪ್ರಕರಣದಲ್ಲಿ ಹೊಸದೊಂದು ಟೆನೆಂಟು ಇದೆ ಅದು ಭೂ ದಾನ ಟೆನೆಂಟು :

"Any person to whom land has been granted under section 17 or is deemed to have been granted under sub-section (3) of section 18 shall be recorded as a Bhoodan tenant in the village accounts or the record of rights"

ಈ ಭೂದಾನದ ಟೆನೆಂಟನ್ನು ಸೃಷ್ಟಿ ಮಾಡತಕ್ಕ ಅವಶ್ಯಕತೆ ಏನಿತ್ತು ಎಂಬುದನ್ನೂ ಕೂಡ ಇವತ್ತು ನಾವು ಯೋಚನೆ ಮಾಡಬೇಕು.

Sri K. P. REVANASIDDAPPA (Tiptur).—On a point of order. An Honourable Minister (referring to Sri Ramakrishna Hegde) is reading a newspaper 'Veerakesari'.

Mr. SPEAKER.—I don't find any newspaper. He has got files before him.

ಶ್ರೀ ಎಸ್. ಎಂ. ಕೃಷ್ಣ.—ಭೂ ದಾನ ಟೆನೆಂಟು ಎನ್ನುವ ಈ ಹೊಸ ಜಾತಿ ಒಂದನ್ನು ಸೃಷ್ಟಿ ಮಾಡತಕ್ಕ ಅಗತ್ಯ ಇಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಒಟ್ಟಿನಲ್ಲಿ ಭೂದಾನದ ಈ ವಿಧೇಯಕ ಸಮರ್ಪಕವಾಗಿಲ್ಲ—ಇದರ ಅವಶ್ಯಕತೆ ಇವತ್ತಿನವುಟ್ಟಿಗೆ ಕಂಡ ಬರುವುದಿಲ್ಲ. ಒಂದು ಪಕ್ಷ ಇದು ಪಾಸ್ ಆಗಲೇ ಬೇಕೆನ್ನುವ ದೃಷ್ಟಿ ಮಾನ್ಯ ಸಚಿವರಲ್ಲಿ ಇರಬಹುದಾದರೆ ಇದಕ್ಕೆ ಸಾಕಾದಷ್ಟು ತಿದ್ದುಪಡಿ ಅವಶ್ಯಕವಾಗಿ ಆಗಬೇಕಾಗಿದೆ. ಮತ್ತು ನಾನು ಈ ಸಭೆಯ ಗಮನವನ್ನು ಮತ್ತು ಸಚಿವರ ಗಮನವನ್ನು ಸೆಳೆದಿರತಕ್ಕ ಹಲವು ಸ್ಪಷ್ಟ ಪ್ರಕರಣಗಳ ಬಗ್ಗೆ ಮಾನ್ಯ ಸಚಿವರು ಮತ್ತೆ ಪುನರಾಲೋಚನೆ ಮಾಡಬೇಕಾಗಿದೆ. ಈ ಕೆಲಸವನ್ನು ಯಾರು ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದಾರೆಯೋ ಅಂಥವರ ಕೈಗೆ ಬಿಟ್ಟುಕೊಟ್ಟು ಸರ್ಕಾರ ಈಗಾಗಲೇ ವಹಿಸಿರತಕ್ಕ ಜವಾಬ್ದಾರಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದರೆ ನೀವು ಸರ್ಕಾರದಲ್ಲಿ ಇದ್ದದ್ದಕೂ ಕೂಡ ಸಾರ್ಥಕವಾಗುತ್ತದೆ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಸಭಾಪತಿಗಳೇ ಇವತ್ತು ನಮ್ಮ ಮುಂದೆ ಇರುವ ಮಸೂದೆಗೆ ಬೆಂಬಲ ಕೊಡುತ್ತ ಕೆಲವು ಸೂಚನೆಗಳನ್ನು ಕೊಡಬೇಕೆಂದು ಇಷ್ಟಪಡುತ್ತೇನೆ. ಈ ಮಸೂದೆ ಅದಷ್ಟು ಬೇಗ ಆಗಬೇಕಾಗಿದ್ದರೂ ನಮ್ಮ ದೇಶದಲ್ಲಿ ಶ್ರೀ ಆಚಾರ್ಯ ವಿನೋಬಾಭಾವೆ

(ಶ್ರೀ ಎ. ಪಿ. ಅಪ್ಪಣ್ಣ)

ಯವರು ತಮ್ಮ ಸ್ವಪ್ರಯತ್ನದಿಂದ ಶೇಖರಣೆ ಮಾಡಿರತಕ್ಕ ಭೂಮಿಯನ್ನು ವಿತರಣೆಮಾಡುವ ಕಾರ್ಯದಲ್ಲಿ ನಾವು ಈಗಾಗಲೇ ಬಹಳ ಕಾಲವನ್ನು ವಿಳಂಬ ಮಾಡಿದ್ದೇವೆ. ಈಗ ಇದನ್ನು ಸ್ವಾಗತ ಮಾಡುವುದು ಅವಶ್ಯಕ. ಈ ಮಸೂದೆಯಲ್ಲಿರತಕ್ಕ ಕೆಲವು ಅಂಶಗಳನ್ನು ತೆಗೆದುಕೊಂಡರೆ ಇದರ ವಿತರಣೆಯ ಕಾರ್ಯ ಇನ್ನೂ ವಿಳಂಬವಾಗುವುದಕ್ಕೆ ಅವಕಾಶ ಆಗುವುದೇನೋ ಎಂಬ ಸಂಶಯಕ್ಕೆ ಶ್ರೀ ಕೃಷ್ಣ ಅವರು ಹೇಳಿದಂತೆ ಒಂದು ಅವಕಾಶವಿದೆ. ಗ್ರಾಮದಲ್ಲಿ ಯಾವನಿಗೆ ಭೂಮಿಯಿಲ್ಲವೊ ಅಂಥವನಿಗೆ ಭೂಮಿಯನ್ನು ಕೊಡಲು ಗ್ರಾಮದ ಜನರೆಲ್ಲ ಒಟ್ಟಿಗೆ ಸೇರಿ ಅವರು ಸರ್ವಾನುಮತದಿಂದ ಭೂಮಿಯನ್ನು ಹಂಚಲು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದೆ. ಇದು ಬಹಳ ದೊಡ್ಡ ಕೆಲಸ ಇನ್ನಾದರೂ ಈ ವಿತರಣೆ ಕಾರ್ಯ ವಿಳಂಬವಾಗದಂತೆ ನಡೆಯಬೇಕಾಗಿದ್ದರೆ ಇಂಥ ಒಂದು ಇಕ್ಕಟ್ಟು ಇರಬಾರದೆಂದು ಹೇಳುತ್ತೇನೆ. ಭೂದಾನ ಯಜ್ಞ ಕಾಲದಲ್ಲಿ ಅನೇಕ ಜನ ಭೂಮಿಯನ್ನು ಕೊಡುವ ಕಾಲದಲ್ಲಿ ಆ ಭೂಮಿಯನ್ನು ಎಂಥವರಿಗೆ ಕೊಡಬೇಕು ಎಂಬುದನ್ನು ಅವರು ದಾನಪತ್ರದಲ್ಲಿ ಸೂಚಿಸಿರುತ್ತಾರೆ. ಯಾರು ಭೂಮಿಯಲ್ಲಿ ಬಹಳಕಾಲ ದುಡಿದು, ಭೂಮಿಯಿಲ್ಲದೆ ಇರುತ್ತಾನೋ ಅಂಥವನಿಗೇ ಆ ಭೂಮಿಯನ್ನು ಕೊಡಬೇಕೆಂದು ದಾನಪತ್ರದಲ್ಲಿ ತೋರಿಸಿರುತ್ತಾರೆ. ಈ ವಿಚಾರದಲ್ಲಿ ಸರ್ಕಾರ ತುಂಬ ಆಲೋಚನೆ ಮಾಡಬೇಕಾಗಿದೆ. ಆದರೆ ಈಗ ಭೂಮಿಯನ್ನು ಕಾಲವಿಳಂಬ ಮಾಡದೆ ವಿತರಣೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ನ್ಯಾಯವಾಗಿ ಯಾರು ಭೂಮಿಯಿಲ್ಲದೆ, ಬಹಳ ವರ್ಷಕಾಲ ಆ ಭೂಮಿಯಲ್ಲೇ ಕೂಲಿ ವಗೈರೆ ಕೆಲಸ ಮಾಡಿಕೊಂಡಿರುತ್ತಾನೋ ಅಂಥವನಿಗೆ ಆ ಭೂಮಿಯನ್ನು ಕೊಡುವುದು ಒಳ್ಳೆಯದು. ಇಂಥ ಒಂದು ನಿಬಂಧನೆಯಿರುವುದು ಒಳ್ಳೆಯದೆಂದು ನಾನು ಸರ್ಕಾರಕ್ಕೆ ಸೂಚಿಸಲಿಚ್ಛಿಸುತ್ತೇನೆ. ಆದರೆ ಈಗ ಭೂದಾನ ಮಂಡಲಿಯವರು ಕೊಡತಕ್ಕ ಭೂಮಿಗೆ, ಆ ಭೂಮಿಯನ್ನು ಪಡೆದವನು ಪೂರ್ಣ ಹಕ್ಕುದಾರನಾಗಿರುತ್ತಾನೆಯೋ ಎನ್ನುವುದು ಈ ಮಸೂದೆಯಿಂದ ಗೊತ್ತಾಗುತ್ತಿಲ್ಲ. ಆದರೆ ಹಾಗೆ ಭೂಮಿಯನ್ನು ಪಡೆಯತಕ್ಕ ಮನುಷ್ಯ ಯಾರಿದ್ದಾನೆ ಅವನಿಗೆ ಅದನ್ನು ಮಾರಾಟ, ದಾನ, ಇತ್ಯಾದಿ ರೀತಿಗಳಲ್ಲಿ ಪರಭಾರೆ ಮಾಡುವುದಕ್ಕೆ ಅವಕಾಶ ಕೊಡದಿರುವುದು ಒಳ್ಳೆಯದೇ ಸರಿ. ಆದರೆ ಆ ಭೂಮಿಯನ್ನು ಪಡೆಯತಕ್ಕ ವ್ಯಕ್ತಿ ಅದನ್ನು ಅಭಿವೃದ್ಧಿ ಮಾಡಿ, ಅದರಲ್ಲಿ ಹೆಚ್ಚು ಬೆಳೆ ತೆಗೆಯಬೇಕಾಗಿದ್ದರೆ ಆ ಭೂಮಿಯಮೇಲೆ ತಕಾವಿ ಇತ್ಯಾದಿ ಸಾಲಗಳನ್ನು ಪಡೆಯಲು ಆತನಿಗೆ ಅವಕಾಶವಿರಬೇಕು. ಆದರೆ ಅದಕ್ಕೆ ಈ ಮಸೂದೆಯಲ್ಲಿ ಅವಕಾಶವಿಲ್ಲವೆಂಬ ಸಂಶಯ ಉಂಟಾಗಿದೆ. ಭೂಮಿಗೆ ಒಡೆಯನಾಗತಕ್ಕವನನ್ನು ಕೇವಲ ಟೆನೆಂಟ್ ಎಂದು ಹೇಳಲಾಗಿದೆ. ಈ ದಿವಸ ಯಾರು ಭೂಮಾಲೀಕನಾಗುತ್ತಾನೋ ಅವನು ಹೆಚ್ಚುಬೆಳೆ ಬೆಳೆಯಬೇಕೆಂಬ ಧೋರಣೆಯನ್ನು ಸರ್ಕಾರ ಹೊಂದಿದೆ. ಆದುದರಿಂದ ಆತನಿಗೆ ಸಾಲ ಎತ್ತಲು ಅವಕಾಶ ಕೊಡಬೇಕಾದ್ದು ಉಚಿತವೆಂದು ಕಾಣುತ್ತದೆ. ಅಂಥ ಒಂದು ಅವಕಾಶವಿಲ್ಲದೆ ಇದ್ದರೆ ಭೂಮಿಯನ್ನು ಕೊಟ್ಟಿದ್ದಕ್ಕೂ ಪ್ರಯೋಜನವಿಲ್ಲ ಎಂಬ ಒಂದು ಅಭಿಪ್ರಾಯವೂ ಇದೆ. ಕ್ಲಾಜ್ 22ರ ಒಳಕ್ಲಾಜ್ ಎರಡರಲ್ಲಿ ಹೇಳಿರುವುದು ಸರಿಯಾಗಿದೆ. ಆದರೆ ನಮ್ಮ ದೇಶದ ಕೆಲವು ಭಾಗದಲ್ಲಿ ಕಂದಾಯವಿಲ್ಲದ ಜಮೀನೂ ಇರುತ್ತದೆ. ಜಹಗೀರು, ಜಮಾಹಿತಿ ಇತ್ಯಾದಿ ಜಮೀನುಗಳಿಗೆ ಕಂದಾಯವಿಲ್ಲ. ಇಂಥ ಭೂಮಿಗಳನ್ನೂ ದಾನ ಕೊಟ್ಟಿದ್ದಾರೆ. ಈ ಜಮೀನುಗಳನ್ನು ಭೂಹೀನರಿಗೆ ಹಂಚಿದ ನಂತರ, ಆ ಜಮೀನುಗಳಿಗೆ ಕಂದಾಯ ನಿಗದಿ ಮಾಡತಕ್ಕ ಕಾಲದಲ್ಲಿ ಅಕ್ಕಪಕ್ಕದ ಕಂದಾಯದ ಜಮೀನಿಗೆ ಏನು ಕಂದಾಯ ಹಾಕಿದ್ದಾರೆ ಎಂಬುದನ್ನು ಪರಿಶೀಲಿಸಿ ಕಂದಾಯ ಹಾಕಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 21 ರ ಒಳಕ್ಲಾಜ್ (2) ರಲ್ಲಿ ನಮ್ಮ ಇಂಡಿಯನ್ ಲಿಮಿಟೇಷನ್ ಆಕ್ಟ್ ಪ್ರಕಾರ ಸಿವಿಲ್ ಕೋರ್ಟುಗಳಲ್ಲಿ ಎಕ್ಸ್ ಪಾರ್ಟಿ ಡಿಕ್ರಿಯಾದರೆ ಎಷ್ಟು ಕಾಲದಲ್ಲಿ ಅದನ್ನು ಸೆಟ್ಟಸೈಡ್ ಮಾಡಬಹುದು ಎಂಬುದನ್ನು ಹೇಳಿದ್ದಾರೆ. ಕ್ಲಾಜ್ (20) ಒಳಕಾಜ್ (2) ರಲ್ಲಿ ರೆವಿನ್ಯೂ ಅಧಿಕಾರಿಗಳ ತೀರ್ಪಿನ ಮೇಲೆ, ಯಾರಿಗಾದರೂ ಆ ಜಮೀನಿನಲ್ಲಿ ಹಕ್ಕಿದ್ದರೆ ಅಂಥವರು 6 ತಿಂಗಳೊಳಗಾಗಿ ಕೋರ್ಟಿಗೆ ಅರ್ಜಿ ಹಾಕಬಹುದೆಂದು ಹೇಳಿದ್ದಾರೆ.

4-00 P.M.

ಸಿವಿಲ್ ಕೋರ್ಟಿನಲ್ಲಿ ಇಂತಹ ಒಂದು ಆರ್ಡರನ್ನು ಮಾಡಿದರೆ ಅದನ್ನು ಸೆಟ್‌ಅಸೈಡ್ ಮಾಡಲು ಲಿಮಿಟೇಷನ್ನು ಆಕ್ಟಿನ ಪ್ರಕಾರ "within one month from the date of such order" ಅಪೀಲ್ ಮಾಡಬೇಕು ಎಂದಿದೆ.

ಇದರ ಬಗೆಗೆ ಒಂದು ಉದಾಹರಣೆ ಇಲ್ಲಿ ಹೇಳಬೇಕಾಗಿದೆ. ಕೆಲವು ಜನರು ಹೇಳುತ್ತಾರೆ ಭೂದಾನ ಯಜ್ಞಕ್ಕಾಗಿ ಕೆಲವುಕಡೆ ಬಂಜರು ಜಮೀನುಗಳನ್ನು ಕೊಟ್ಟಿದ್ದಾರೆ. ಇದು ಕೂಡ ಇರಬಹುದು

ಇನ್ನೊಂದು ಸಂದರ್ಭದಲ್ಲಿ ಒಬ್ಬರು ನೀಘಾಗಡಿಯಲ್ಲಿ ಮಿಲಿಟರಿ ಕೆಲಸದಮೇಲೆ ಹೋಗಿರುವಾಗ ಅವರ ತಮ್ಮಂದಿರು ಅವರಿಗಿರುವ ಜಮೀನನ್ನು ಭೂದಾನಕ್ಕಾಗಿ ಕೊಟ್ಟುಬಿಡುತ್ತಾರೆ, ಅದರಮೇಲೆ ರೆವಿನ್ಯೂ ಅಧಿಕಾರಿಗಳು ಆರ್ಡರು ಮಾಡುತ್ತಾರೆ. ಅದನ್ನು ಸೆಟ್ ಸೈಡ್‌ಮಾಡಬೇಕಾದರೆ ಸಿವಿಲ್ ಕೋರ್ಟಿನಲ್ಲಿ ಲಿಮಿಟೇಷನ್ನು ಟೈಮ್ ಇದೆ, ಆಮೇಲೆ ಅದನ್ನು ಚಾಲೆಂಜು ಮಾಡುವುದಕ್ಕೆ ಸಾಧ್ಯವಿಲ್ಲ. ಲಿಮಿಟೇಷನ್ನು ಆಕ್ಟಿನಲ್ಲಿ "within one month from the date of such order" ಎಂದು ಕಾಲಪರಿಮಿತಿ ಇದೆ. ಇದರಮೇಲೆ ನಿರ್ಧಾರಮಾಡಲು ಒಂದು ಅವಕಾಶಮಾಡಿಕೊಟ್ಟ ಹಾಗಾಗುತ್ತದೆ.

ಕಾಲಮು 20 (2) ರಲ್ಲಿ 'within six months from the date of such order' ಎಂದಿದೆ. ಇದನ್ನು ಸರಿಯಾಗಿ ಪರಿಶೀಲನೆ ಮಾಡಿ ಬದಲಾವಣೆಯನ್ನೇಕೆ ಮಾಡಬಾರದು ಎಂದು ಸರಕಾರ ಯೋಚಿಸಬೇಕು. ಈ ಶಾಸನದ ಮೇರೆಗೆ ನಾವು ಕೈಗೊಳ್ಳಬೇಕಾದ ಕಾರ್ಯ ಕೆಲಸಗಳೇನು ಎನ್ನುವುದನ್ನು ತಾವು ಯೋಚನೆ ಮಾಡಿ ವಿಚಾರವಿನಿಮಯ ಮಾಡಿ ಕಷ್ಟವಿಲ್ಲದಂತೆ ಸುಲಭವಾಗಿ ಕಡಮೆ ಕಾಲದಲ್ಲಿ ಇದನ್ನು ಹೇಗೆ ಇತ್ಯರ್ಥ ಮಾಡಬೇಕು ಎನ್ನುವುದನ್ನು ಸರಕಾರದವರು ಯೋಚಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri SANJIVANATHA IKALA (Suratkal).—If the Mysore Government is capable of anything, it is capable of piloting any number of Bills. The Bill now before this House is remarkable proof of what I said just now. I do not find any necessity of having in the statute book a law to govern the distribution of Bhoodan lands. The Bhoodan movement is a voluntary movement and it does not broke any intereference at the hands of Government.

Sri M. V. KRISHNAPPA.—On the advice of Vinobhaji we have done this.

Sri SANJEEVANATHA IKALA.—I do not think so. When some press Reports asked Vinobhaji as to whether he would welcome Governmental influence, his answer was an emphatic 'No.' He does not want Government's help. He wants the movement to be spontaneous. To say that such a person wanted the Government to come forward with a law of this kind is sheer blasphemy.........

Sri M. V. KRISHNAPPA.—Shall I show the Correspondence, if the Hon. Member does not believe the Government?

Sri SANJEEVANATHA IKALA.—I would like to see it.

Mr. SPEAKER.—It can be done later on.

Sri SANJEEVANATHA IKALA.—Government is trying to corrode into what is essentially a philosophic and philonthropic movement. All the clauses of this Bill give a hand to Government to interfere at every stage in the working of the movement. The movement had gone on well during the last 6 years without Government meddling with it. I do not know why the Government wants to put its nose at this stage. This Bill aims at the formation of a Board. Perhaps there will be some Ministers who will be shortly dislodged and they would find accommodation in the Board. That seems to be the main idea behind this Bill. The Bill provides that the Government would consult Vinoba Bhave regarding the constitution of the Board. I do not know why the Government wants to trouble Vinobhaji who is trying to be away from the doldrums of Government. Why should these malicious things be done in his name? I would like to ask the Government whether they have

(SRI SANJEEVANATHA IKALA)

his postal address because he is a man always on the move and it is imposible to find him. He will only say "Leave me alone. Do not disturb me'.

The Bill is not comprehensive and there are so many contradictory clauses. The Bhoodan movement aims at changing the social structure and the hearts of the people. But the Bill ignores these basic concepts. At every stage Government is to interfere with the spontaneous and natural urges of the people. There is no financial statement attached though there is a bald statement in clause 11 about the functions of the Board. Funds are to come by way of donation. I do not know whether the Bhoodan movement permits collection of funds. Vinobhaji had often stressed that the movement must be a 'Sampan Mukhta' and Bandan Mukhta', that is, it must be free from financial and organisational clutches. But the Bill wants to impose such clutches on the movement.

There are other clauses which are incongruous. At one place it is said that land should be given to the landless labourers. At another place we find that land is to be given to persons whose occupation is agriculture. How can a landless man have agriculture as his occupation? He can at the utmost be a landless labourer. He would work on land but cannot be said to have agriculture as his occupation. Government perhaps wants to encroach upon the donated lands and take possession of them somehow.

In this connection I wish to say one thing. As I know, a certain phylanthropic gentleman has given nearly three to four hundred acres of land in the vicinity of Bangalore in one of the finest centres, which has immense capacity of development. If this Bill becomes an Act, the ownership of that land will go to the Board and ultimately the members of the Board, under the pretext of this clause, take away a piece of land to themselves or give the same to their near relatives. I feel that the land will be distributed amongst themselves. Under the provision of this Blll, they may claim a major portion of the Vishvaneedan centre and ultimately knock-away a great portion of the centre. So, I do not feel very happy about this Bill. In order that we shall have more time to discuss and bring in certain amendments, I wish that the Bill should be considered by a small Select Committee so that we may suggest certain major changes at that stage which may be accepted by the sponsors of the Bhoodan movement.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಬಂದಿರತಕ್ಕಂಥ ಈ ಭೂದಾನ ಯಜ್ಞ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈ ಮಸೂದೆ 1959 ರಲ್ಲಿಯೇ ಚರ್ಚೆಗೆ ಬರಬೇಕಾಗಿತ್ತು. ತಡವಾಗಿ ಬಂದಿದ್ದರೂ ನಾವು ಈ ಮಸೂದೆಯನ್ನು ಸ್ವಾಗತಿಸಬೇಕಾಗಿದೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಮಾತನಾಡಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಂದು ಪಕ್ಷಕ್ಕೆ ಅವಕಾಶ ಕಲ್ಪಿಸಿಕೊಡುವುದರಿಂದ ಭೂದಾನ ಕಾರ್ಯ ಸರಿಯಾಗಿ ನಡೆಯುವುದಕ್ಕೆ ಅವಕಾಶವಿಲ್ಲ ಈ ಮಸೂದೆ ಸಮರ್ಪಕವಾಗಿಲ್ಲ ಎಂದು ಮುಂತಾಗಿ ಕೆಲವರು ಹೇಳಿದರು. ಕೆಲವೊಂದು ಮಾರ್ಪಾಟಗಳನ್ನು ಸಹ ಸೂಚಿಸಿದ್ದಾರೆ. ಪೂಜ್ಯ ವಿನೋಬಾ ಭಾವೆಯವರು ಮಹಾತ್ಮಾ ಗಾಂಧಿಯವರು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದಂತೆ, ಆರ್ಥಿಕ

ರಂಗದಲ್ಲಿ ಶಾಂತಿ ಸಮಾಧಾನ ಉಂಟಾಗುವುದಕ್ಕೆ ಒಂದು ರೀತಿಯ ಕಾರ್ಯ ಚಟುವಟಿಕೆ ಪ್ರಾರಂಭಿಸಿದರು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಭೂಧಾನ ಯಜ್ಞ ಪ್ರಾರಂಭ ಮಾಡಿದಾಗಿನಿಂದ ಕಳೆದ ಹತ್ತು ವರ್ಷಗಳಲ್ಲಿ ಅನೇಕ ಕಡೆ ಜನರು ಧಾರಾಳವಾಗಿ ಭೂಮಿ ಕೊಡುತ್ತಿದ್ದಾರೆ. ಯಾವ ಒತ್ತಾಯವೂ ಇಲ್ಲದೆ ಸುಮಾರು ಇಪ್ಪತ್ತು ಸಾವಿರ ಎಕರೆ ಭೂಮಿ ಬಂದಿದೆ. ನಮ್ಮ ಸುತ್ತು ಮುತ್ತು ಇರತಕ್ಕಂಥ ಜನ ಸುಖವಾಗಿ ಇರಬೇಕು ಎಂಬ ಭಾವನೆಯಿಂದ ಈ ಕಾರ್ಯ ಪ್ರಾರಂಭಿಸಲಾಗಿದೆ. ಇದನ್ನು ಪ್ರೇಮದಿಂದ ಮಾಡುವುದು ಸಾಧ್ಯ ಕಾನೂನಿನಿಂದ ಮಾಡಲು ಸಾಧ್ಯವಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಈ ಮಸೂದೆಯಲ್ಲಿರುವ ಹಾಗೆ ಒಂದು ಬೋರ್ಡ್ ರಚನೆ ಮಾಡತಕ್ಕಂಥ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದರು. ಸರಿಯಾಗಿ ವಿತರಣೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಕೆಲವು ಕಡೆ ಆ ರೀತಿ ಅನ್ಯಾಯವಾಗಿರಬಹುದು ವಿತರಣೆಯಾಗದೆ ಇರಬಹುದು. ಆದರೂ ಸರ್ವೋದಯ ಕಾರ್ಯಕ್ರಮವನ್ನು ವಿನೋಬಾ ಭಾವೆಯವರು ಸಮರ್ಪಕವಾಗಿ ಸೂಕ್ತವಾದ ರೀತಿಯಲ್ಲಿ ನಡಸಿಕೊಂಡು ಬಂದಿದ್ದಾರೆ. ಈಗ ಈ ಮಸೂದೆಯಿಂದ ಹೆಚ್ಚಿನ ನೆರವು ಬೇಕಾಗಿದೆ. ಈ ಬೋರ್ಡ್ ರಚನೆ ಮಾಡತಕ್ಕಂಥಾದ್ದು ಅವಶ್ಯಕವಾಗಿದೆ. ಪೂಜ್ಯ ವಿನೋಬಾಜೀಯವರ ಸಲಹೆಯ ಪ್ರಕಾರ ಅವರು ಹೇಳುವ ಹೆಸರುಗಳನ್ನು ತೆಗೆದುಕೊಂಡು ಸದಸ್ಯರಾಗಿ ಮಾಡಬೇಕಾಗುತ್ತದೆ. ಈ ಕಾರಣದಿಂದ ಇದರಲ್ಲಿ ಯಾವ ರಾಜಕೀಯ ಸಂಬಂಧವಿಲ್ಲ ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಸರ್ವೋದಯ ಕಾರ್ಯಕರ್ತರು ಯಾವ ಪಕ್ಷಕ್ಕೆ ಸೇರಿದವರಲ್ಲ. ಆದುದರಿಂದ ನಾವು ಈ ಬೋರ್ಡಿನ ಸದಸ್ಯರ ಬಗ್ಗೆ ಭಯಪಡಬೇಕಾಗಿಲ್ಲ. ಸರ್ವ ಸಮ್ಮತಿಯಿಂದ ಇದನ್ನು ತೀರ್ಮಾನ ಮಾಡಲಾಗುವುದು. ಇನ್ನೊಂದು ವಿಚಾರ. ಈ ಮಸೂದೆಯ 14 ನೆಯ ಕಲಮಿನಲ್ಲಿ ಜಮೀನು ಯಾರಿಂದ ದಾನ ಪಡೆಯಿರುತ್ತದೆಯೋ ಅವರು ಜೀವಂತ ಇರುವವರೆಗೆ ಹಕ್ಕು ತೆಗೆದುಕೊಳ್ಳಬಾರದು ಎಂದು ಈ ಕಾನೂನಿನಲ್ಲಿ ಬರೆದಿದೆ. ಯಾರೇ ಆಗಲಿ ದಾನ ಕೊಟ್ಟಮೇಲೆ ಆಶೆ ಬಿಟ್ಟು ತ್ಯಾಗ ಮಾಡತಕ್ಕಂಥಾ ಅವಶ್ಯಕ. ಬಂಜರು ಜಮೀನು ಸಹ ಕೊಡುವಾಗ್ಗೆ ಆಶೆ ಬಹುಮಟ್ಟಿಗೆ ಹೋಗಿರುತ್ತದೆ. ಏಕೆಂದರೆ ಅಂಥ ಜಮೀನು ಸಾಗುವಳಿಗೆ ತಯಾರಾಗುವುದಿಲ್ಲ. ಆಶೆಯನ್ನು ಹತೋಟಿಯಲ್ಲಿಡಬೇಕಾಗುತ್ತದೆ. ಎಂಥವನೇ ಜಮೀನು ಕೊಡಲಿ ಅದನ್ನು ಸಂತೋಷದಿಂದ ಸ್ವೀಕರಿಸಿ ವ್ಯವಸ್ಥೆ ಮಾಡಬೇಕಾಗುತ್ತದೆ. ಇದರಲ್ಲಿ ಯಾವ ತಪ್ಪು ಇಲ್ಲ.

ಅದರ ವಿಷಯದಲ್ಲಿ ಸಹ ಹೆಚ್ಚಿನ ಒಂದು ಅವಕಾಶವನ್ನು ಕಲ್ಪಿಸಿ, ಸಂಪತ್ತಿದಾನವನ್ನು ಪ್ರೋತ್ಸಾಹಿಸಬೇಕು. ಜಮೀನು ಇದ್ದವರು, ಸಂಪತ್ತು ಇದ್ದವರು ಕೊಡಬೇಕು. ಎಲ್ಲ ರೀತಿಯಲ್ಲಿಯೂ ತಮ್ಮ ಸ್ವಾರ್ಥವನ್ನು ಬಿಟ್ಟು ಪರರಿಗೆ ಕೊಡುವ ಅವಕಾಶಗಳನ್ನು ಕಲ್ಪಿಸಬೇಕು. ಈ ಕಾರ್ಯವನ್ನು ಭೂದಾನ ಬೋರ್ಡು ಮಾಡುವುದಾದರೆ, ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆ. ಅಂಥದಕ್ಕೆ ಸರಕಾರ ಈಗ ಅವಕಾಶವನ್ನು ಕಲ್ಪಿಸಿಕೊಟ್ಟಿರತಕ್ಕಂಥದ್ದು ಬಹಳ ಸಮರ್ಪಕವಾಗಿದೆ.

ಕೊನೆಯದಾಗಿ, ಇದರಲ್ಲಿ 18ನೆಯ ಸೆಕ್ಷನಿನಲ್ಲಿ ಅಧಿಕಾರವನ್ನು ಹೆಚ್ಚಿಗೆ ರೆವಿನ್ಯೂ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ತೀರ್ಮಾನಮಾಡುವ ಅಧಿಕಾರವನ್ನು ಬೋರ್ಡಿಗಿಂತ ಹೆಚ್ಚಿಗೆ ಅವರಿಗೆ ಕೊಟ್ಟಿದ್ದಾರೆ. ಅದರ ಬದಲು ಬೋರ್ಡಿಗೇ ಅಧಿಕಾರವಿರಲಿ. ರೆವಿನ್ಯು ಅಧಿಕಾರಿಗಳ ಸಲಹೆ, ಖಾತೆ ವಿಚಾರದಲ್ಲಿ, ಹಕ್ಕು ವಿಚಾರದಲ್ಲಿ ಬೇಕಾಗುತ್ತದೆ. ಅಷ್ಟು ಮಾತ್ರ ಅಧಿಕಾರಗಳಿಂದ ತೆಗೆದುಕೊಂಡು ಮಿಕ್ಕೆಲ್ಲ ತೀರ್ಮಾನ ಮಾಡುವ ಅಧಿಕಾರವನ್ನೂ ಬೋರ್ಡಿಗೇ ವಹಿಸಬೇಕು. ಏಕೆಂದರೆ ಈ ಬೋರ್ಡಿನ ತೀರ್ಮಾನ ಎಲ್ಲರ ಒಂದು ಹಿತಕ್ಕಾಗಿರುತದೆ ಮತ್ತು ಅದು ಗ್ರಾಮದಲ್ಲಿ ಸರಿಸಮಾನತೆ ಮತ್ತು ಸು ಶಾಂತಿಯನ್ನು ನೆಲಸುವ ಮಹತ್ವಪೂರ್ಣವಾದ ಕಾರ್ಯ ಚಟುವಟಿಕೆಯಲ್ಲಿ ತೊಡಗಿರುತ್ತದೆ. ಈ ಅಧಿಕಾರ ಬೋರ್ಡಿಗಿಲ್ಲದಿದ್ದರೆ ಅದು ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ.

ನಾನು ಈ ಭೂದಾನ ವಿಧೇಯಕವನ್ನು ಸ್ವಾಗತಿಸಿ, ಬೆಂಬಲ ಕೊಡುತ್ತೇನೆ ಮತ್ತು ಈ ಒಂದು ಸನ್ನಿವೇಶದಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI V. S. PATIL (Belgaum I).—Sir, this is a very strange piece of legislation that has been brought before this House. In the first place I should like to ask the Hon'ble Minister and his Secretariat as well as the Legal Department as to whether there is any legislation in the whole of our country or as a matter of fact in the whole world, where under statute, a particular individual has been given a particular status? I feel

(SRI V. S. PATIL)

that the statutes or laws are meant for general application and not for a particular individual. I should like to ask the Hon'ble Minister who has been not only in this Assembly but also in the Centre as to whether he has ever come across any Bill or statute under which any particular individual was given a status that is proposed to be given in the present Bill. I understand as to why a particular individual is being given or recognised to be of a particular status under an act. After all Vinoba Bhave is an individual —he was born like any one of us and he is also liable to d e. Then what is to be done with regard to the various provisions? There is no successor mentioned here.

Sri M. V. KRISHNAPPA.—"In his life-time," we have mentioned.

Sri V. S. PATIL.—After his life time, what is to happen? are we to presume that this Bill continues, only till he is alive and after his death, it is to be wiped out? What is the intention of the Government? I should like to know whether there is any law in this world where such an individual has been given a status under any Act. That is the first point which I should like to ask.

The second point is, what is the Bhoodan movement? That is a point to be considered especially by you who are interested in the welfare of the tenants or the cultivators of the Land. This Bhoodan movement was started as we all know when Telengana was *under the control* of communists and there was some trouble regarding the land cultivators in some troubles were created. In order to counteract the communists, Vinoba Bhave came forward with the idea of Bhoodana Yagna. Sir, in a secular State like ours, when we profess to have no religion or no kind of religious influence to look after the welfare of the people in general, the basic principle must be that a man must work for his bread. We should not give much credit to these old ideas. These ideas of *dana* and living on *dana*- all these must be wiped out. We must live on our labour and on our intelligence; this kind of *dana* and li ing on *dana* these archaic ideas savour of old Hindu ideas and other religious precepts should not be allowed to have any sway over our feelings in piloting or controlling the affairs of a secular State. Sir, this word *dana* should have no place in any of our statutes at all. The very idea that every one must work for his bread for his maintenance is clearly wiped out by this idea of *dana*, especially this Bhoodana that is being propagated by the followers of Vinoba Bhave. We may have great respect for his knowledge, for his experience, for his sacrifices. But the ideas which he has propagated are based upon religion to which our Constitution has clearly given the go-by. Why should we encourage this idea of '*Bhood n*' and '*Sampathi dana*' by bringing up this kind of a Bill? All sorts of things are recognised in the Bill. Now Sir, this is the second point which I should like to raise before this House.

The third point is, the basic principle of our policy, that the land must go to the tiller. The Tiller himself must be the owner of the land.

This basic principle has been accepted everywhere in our country. Even by the Congress High Command, the Planning commission, etc. etc. But here we are creating a new type of tenants who are affected by the sweet Bill of that great man or his followers. Is this proper? I should like to know from the Hon'ble Minister whether we can make such a distinction between the tenant and the landlord who is the private owner or an institution and the tenant cultivating land under this Bhoodan movement. When *dan* is made, according to this, it cannot be revoked. So the land goes to the Board according to this Bill and the Board gives the land to the tenant. Why should not it not be another gift from the Board to the tenant. Why is he to be kept under suspension for being turned out of the land if the President or members or any of these Bhoodan movement leaders consider that he is not a person, who is going to help Congress, because all this is meant for helping Congress? That is very plain. There can be no confusion about this Bhoodan movement. Vinoba Bhave is trying to push the roots of the Congress far deeper in every taluk of our country. That is the main purpose. So, if the Congress people complain in a particular case that a certion man is not helpful to Congress, naturally that man will be evicted summarily from the land. That is really speaking against the principle of the land to the tiller. This is a new class of tenants that is being created.

The sword is always kept hanging over his head to support the congress party. I feel that such a clause of tenants should not be created. He should be on a par with other tenants who are cultivating the land. If they become owners, this man also must become owner. Why another institution, named as Bhoodan Board, has been created? At present Government is the owner of the land. The occupants are the tenants. Then we are taking out the excess land from these occupants and distribute it to others who are actual cultivators. They will be termed occupants. Apart from all this policy, why this Bhoodan tenant should be kept as a tenant for his life? Further more, there is no provision in this Bill that the property or the land given in *bhoodan has* to vest either in Vinoba Bhave or even in the Bhoodan Board. What about the vesting of property which has been gifted away? When it is gifted away by the owner he ceases to have any interest in the land. I suggest that the moment you give that land to a tenant after the lapse of 5, 10 or some prescribed time limit when the ordinary tenant becomes an owner, this tenant also should become the owner of that land. That should be the case.

4-30 P. M.

There is one more provision to which I should like to refer. That is clause 19 dealing with "Settlement of donated land prior to distribution". Sub-clause (2) says:

"The laws for the time being in force relating to tenancies of agricultural lands shall not apply to the settlement under sub-section (1) and no right occupancy in such land shall accrue to the settle who

(SRI V. S. PATIL)

shall be liable to be evicted on the expiry of the prescribed period.' The terms are like those of the tenant at will and how can we expect a tenant who is a tenant at will, who is liable to be evicted, to work more, to invest more and to grow more ? Is it possible at all ? That is the point to be considered by you and I think such a clause should not be there at all.

Clause 26 :

"The State Government may, if it is satisfied that the Board has not been able to grant the land in any year, remit the land revenue or rent due on the land for that year." Are we to presume that the land revenue is to be remitted simply because there was negligence on the part of this Board to engage tenants for cultivation? These are very strange things that we are enacting here. Suppose a private land owner does not cultivate the land or his tenant does not cultivate it if it lies fallow for a year or two or even 10 years, Government will never give remission in respect of land revenue. Why this provision is mad here, I cannot understand. All these things clearly go to show that somehow our Minister wants to please that great man by passing such a Bill which will be useless so far as working is concerned. I have heard other members saying that our Government has set up so many Boards, has appointed so many Chairmen or Presidents of those Boards, that they have to feed so many persons and that this Board is also one of such Boards which have been formed up till now. Under clause 4 sub-clause (2)

"The Chairman and members of the Board shall be appointed by the State Government. Provided that during the life time of Shri Acharya Vinoba Bhave, the Chirman and members shall be appointed on his nomination."

I do not understand this. There is another class of bhoodan ; that is 'jeevandan' and all these 'danas' are being created just to misguide the people. You want to create another class by this Act. Under cluase 5.

"Resignation by, and removal of, the Chairman or a member.........

"Provided that during the life time of Shri Acharya Vinoba Bhave such resignation shall be submitted through him."

What is the meaning of this sub-clause ? If a person or a member of the Board has no desire to work there, why should his resignation go through that channel? Sri Vinoba might be in Himalayas; he might go on Padayatra to China. If we impose these conditions, I do not think this piece of legislation is workable at all and you will come to know of the faulty legislation when you enact it. Even otherwise, I plead that this piece of legislation is merely to please him and not to enforce it at all. Even clause 3 which deals with 'disolution of the Board' refers this Acharya Vinoba Bhave.

If this piece of legislation is to be enforced, I think Acharya Vinoba Bhave will have to stay in Bangalore permanently, giving up all his activities outside the State. I suggest that the best course will be to withdraw the Bill honourably and keep it in the cold storage.

†ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮಾನ್ಯ ಸಭೆಯ ಮುಂದೆ ಮಾನ್ಯ ಕಂದಾಯ ಸಚಿವರು ಮಂಡಿಸಿರುವ ಈ ಭೂದಾನ ಯಜ್ಞ ವಿಧೇಯಕವನ್ನು ನಾನು ವಿನೋಬಾಜಿಯವರ ಕ್ಷಮೆ ಬೇಡಿ ವಿರೋಧಿಸುತ್ತೇನೆ. ಈ ಮಸೂದೆ ಅತ್ಯಂತ ವಿವಾದಾಸ್ಪದವಾದ ಮಸೂದೆ. ಯಾರು ಶಾಸನ ರಹಿತ ಸಮಾಜವನ್ನು ರಚಿಸಬೇಕು ಎಂದು ಆಶಿಸಿದ್ದರೋ ಅಂಥ ಮಹಾತ್ಮನ ಹೆಸರಿನಲ್ಲಿ ನಾವು ಒಂದು ಶಾಸನವನ್ನು ರಚಿಸುತ್ತಿದ್ದೇವೆ. ಪೂಜ್ಯ ವಿನೋಬಾರವರು ಹೇಳುತ್ತಾರೆ ಕಾನೂನು ಎನ್ನತಕ್ಕದ್ದು ಹೇಗೆ ಒಂದು ಪುಸ್ತಕವನ್ನು ಬರೆದಾದ ಮೇಲೆ ಕೊನೆಯಲ್ಲಿ ಇತಿಶ್ರೀ The end ಎಂದ ಬರೆಯುತ್ತಾರೆಯೋ ಹಾಗೆ ವ್ಯವಸ್ಥೆಯಲ್ಲಿ ಪೂರ್ಣ ಪಾಲನೆಯಾದ ಮೇಲೆ ಅದಕ್ಕೆ ಒತ್ತತಕ್ಕ ಒಂದು ಮುದ್ರೆ ಎಂದು.

ಸಮಾಜದಲ್ಲಿ ಕ್ರಾಂತಿ ಬದಲಾವಣೆ ಆಗಬೇಕು ಅನಂತರ ಶಾಸನಗಳು ಬರಬೇಕೆಂದು ಅವರು ಹೇಳಿದ್ದಾರೆ. ಈ ಭೂದಾನ ಚಳವಳಿ ಯಾವಾಗ ತೆಲಾಂಗಣದಲ್ಲಿ ಕಮ್ಯೂನಿಸ್ಟರು ಈ ಭೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹಿಂಸಾತ್ಮಕವಾದ ಕಾರ್ಯಕ್ರಮವನ್ನು ಕೈ ಕೊಂಡರೋ ಯಾವಾಗ ಅಲ್ಲಿ ರಕ್ತ ಪಾತ ನಡೆಯಿತೋ ಆ ಸಂದರ್ಭದಲ್ಲಿ ವಿನೋಬಾ ಅವರು ಆ ಪ್ರದೇಶಕ್ಕೆ ಪ್ರವಾಸ ಹೋಗಿದ್ದಾಗ ಅಲ್ಲಿ ಭೂಹೀನ ಹರಿಜನರು ಭೂಮಿ ಕೊಡಿ ಎಂದಾಗಲೇ ಒಂದು ಗ್ರಾಮದಲ್ಲಿ ಅವರಿಗೆ ಭೂಮಿ ಕೊಟ್ಟರು ಈ ಭೂಮಿ ಕೊಡತಕ್ಕ ಅಥವಾ ಕೇಳತಕ್ಕ ಕೆಲಸವನ್ನು ಒಂದು ಚಳುವಳಿಯಾಗಿ ಮಾಡಬೇಕೆಂದು ಅಗ ಅವರು ಆಶಿಸಿದರು. ಅವರಿಗೆ ಮೊದಲು ಭೂಮಿ ದಾನ ಬಂದದ್ದು 1951ನೇ ಇಸವಿ ಏಪ್ರಿಲ್ 18ರಲ್ಲಿ ಎಂದು ಗೊತ್ತಾಗುತ್ತದೆ ಅವರು ಈ ಚಳವಳಿಯನ್ನು ಪ್ರಾರಂಭ ಮಾಡಿದ್ದು ಅದೇ ವರ್ಷ ಏಪ್ರಿಲ್ 28ನೇ ತಾರೀಖು. ಆದರೆ ನಾನು ಮೊದಲೇ ಹೇಳಿದಹಾಗೆ ಇದು ಬಹಳ ವಿವಾದಾಸ್ಪದವಾದ ವಿಷಯ. ಏಕೆಂದರೆ ನಾವೆಲ್ಲಾ ಲೌಕಿಕರು; ಲೌಕಿಕವಾಗಿ ವ್ಯವಹರಿಸುತ್ತೇವೆ ಲೌಕಿಕವಾಗಿ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಸಿಬೇಕಾಗುತ್ತದೆ. ಭಾವೆ ಅವರು ಸೂಚಿಸಿರುವ ಪರಿಹಾರ ಅಲೌಕಿಕವಾದುದ್ದು—ಮನಷ್ಯನ ಅಂತಃಕರಣಕ್ಕೆ ಪ್ರಾರ್ಥನೆ ಮಾಡಿಕೊಳ್ಳತಕ್ಕದು. ಮನುಷ್ಯನು ತನ್ನ ಭಾವನೆಯನ್ನು ತಿದ್ದಿಕೊಳ್ಳಬೇಕು ಅವನು ಅಪರಿಗ್ರಹ ಮಾಡಬೇಕೆಂದು ಅವರು ಹೇಳಿದ್ದಾರೆ. ಸೋಷಿಯಲಿಸ್ಟರು ಅಥವಾ ಕಮ್ಯೂನಿಸ್ಟರು ಹೇಳತಕ್ಕ ಸಮಾನತೆಯ ರಾಜ್ಯದಲ್ಲಿ ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳತಕ್ಕ, ಅಪಹರಣ ಮಾಡತಕ್ಕ ವ್ಯವಸ್ಥೆ ಇದು, ಅಭಿಪ್ರಾಯ ಇದು ಎಂದು—ಅದನ್ನು ಬಿಟ್ಟು ಯಾರು ಆಸ್ತಿಪಾಸ್ತಿಗಳನ್ನು ಹೊಂದಿರುತ್ತಾರೆಯೋ ಅವರು ಅದನ್ನು ಹೊಂದಿರಬಾರದು, ತ್ಯಜಿಸಬೇಕು, ಅಪರಿಗ್ರಹವನ್ನು ಅವರೇ ಆಶ್ರಯಿಸಬೇಕು—ನಾನ್ ಪೊಸೆಷನ್—ಆದ್ದರಿಂದ ನಾನು ಈ ಮಾರ್ಗದಲ್ಲಿ ಜಗತ್ತನ್ನು ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು. ಇತಿಹಾಸದಲ್ಲಿ ಭೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದು ಮತ್ತು ಬಗೆಹರಿಸಿ ಒಂದು ಹೆಜ್ಜೆ ಮುಂದೆ ಇಟ್ಟದ್ದು ಎಂದರೆ ರಷ್ಯಾದಲ್ಲಿ—ಕ್ರಾಂತಿಯ ನಂತರ ಸಬಲವಾಗಿತೆಗೆದುಕೊಂಡ ಹೆಜ್ಜೆ ಅದು. ಅದಕ್ಕೆ ಬದಲಾಗಿ ವಿನೋಬಾ ಅವರು ಅಹಿಂಸಾತ್ಮಕವಾಗಿ ಒಂದು ಹೆಜ್ಜೆಯನ್ನು ನಾವು ಇಡೋಣ, ಈ ದೇಶದಲ್ಲಿ ಧಾರ್ಮಿಕ ಶ್ರದ್ಧೆಯ ಜನ ಅವರವರಾಗಿಯೇ ತ್ಯಾಗ ಮಾಡಿಯಾರು ಅಂಥವರನ್ನು ನಾವು ಕೇಳಿಕೊಳ್ಳೋಣ 30 ಕೋಟಿ ಎಕರೆ ಜಮೀನು ಇದೆ ಅದರಲ್ಲಿ ಆರನೇ ಒಂದು ಭಾಗ ಅಂಶವನ್ನು ಪ್ರತಿಯೊಬ್ಬರೂ ಕೊಟ್ಟರೆ 5 ಕೋಟಿ ಎಕರೆಯಾಗುತ್ತದೆ, ಅದನ್ನು ಹಂಚಿದರೆ ಎಲ್ಲರಿಗೂ—ಭೂ ಹೀನರಿಗೆ ಭೂಮಿ ದೊರಕಿದಂತಾಗುತ್ತದೆ ಎನ್ನುವ ಒಂದು ಗುರಿಯನ್ನು ಅವರು ಇಟ್ಟುಕೊಂಡು ಈ ಚಳುವಳಿಯನ್ನು ಪ್ರಾರಂಭಮಾಡಿದರು. ಮಹಾತ್ಮಾ ಗಾಂಧಿಯವರು ಏನು ಅಹಿಂಸಾತ್ಮಕವಾದ ಒಂದು ಸತ್ಯಾಗ್ರಹ ಮತ್ತು ಅಹಿಂಸೆಯ ತತ್ವದ ಮೇಲೆ ಈ ದೇಶದಲ್ಲಿ ಸ್ವಾತಂತ್ರ್ಯವನ್ನು ಗಳಿಸಿದರೋ ಹಾಗೆಯೇ ಅಹಿಂಸೆಯ ಆಧಾರದ ಮೇಲೆ ಈ ಅರ್ಥಿಕ ಕ್ರಾಂತಿಯನ್ನು ಸಾಧಿಸಬೇಕು ಎನ್ನುವುದು ಭಾವೆಯವರ ಬಯಕೆಯಾಗಿತ್ತು. ನಾನು ಮೊದಲಿನಿಂದಲೂ ಈ ಒಂದು ಚಳುವಳಿಯನ್ನು ಸಂಶಯಾಸ್ಪದವಾದ ದೃಷ್ಟಿ ಯಲ್ಲಿ ನೋಡುತ್ತಾ ಬಂದವನು. ವರ್ಗ ಸಂಘರ್ಷಣೆಗೆ ಬದಲಾಗಿ ಈ ಒಂದು ಸೂತ್ರವನ್ನು ಈ ದೇಶದ ಮುಂದೆ ಇಡುವುದಾದರೆ ಕ್ರಾಂತಿಯ ಮಾತು ಮೌನವಾಗುತ್ತದೆ, ಮಂದವಾಗುತ್ತದೆ, ವರ್ಗ ಸಂಘರ್ಷಣೆಗೆ ಅಡ್ಡಿ ಬರುತ್ತದೆ, ಈ ಚಳುವಳಿಯಿಂದ ಭೂಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಹೇಳಿ ನಾವು ಅವರಿಗೆ ಹೇಳಿದ್ದೆವು. ಅವರು ಅದಕ್ಕೆ ಮಾನಸಿಕ ಕ್ರಾಂತಿ ಆಗಲಿ, ತ್ಯಾಗ ಮನೋ ಬುದ್ಧಿ ಜನರಿಗೆ ಬರಲಿ ರಕ್ತ ಪಾತವಾಗುವ ಹಿಂಸಾ ಕ್ರಾಂತಿ ಬೇಡ ಎಂದು ಹೇಳಿದರು. ಕ್ರಾಂತಿ ಎಂದರೆ ರಕ್ತ

(ಶ್ರೀ ಎಸ್. ಗೋಪಾಲಗೌಡ)

ಹರಿಯಲೇ ಬೇಕು ಎಂಬ ಯಾವ ನಿಯಮವೂ ಇಲ್ಲ. ಸ್ವಾತಂತ್ರ್ಯ ಸಂಗ್ರಾಮವನ್ನು ನಾವು ರಕ್ತವನ್ನು ಹರಿಸದೇ ಹೋರಾಟ ನಡೆಸಿ ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ಸಾಧ್ಯವಾಯಿತು. ಇದು ಅ ಸಹಕಾರ ಚಳುವಳಿಯಾಗಿ ಭೂ ಕಾನೂನಿಗೆ ಭಂಗ ತರುವಂಥ ಚಳುವಳಿಯಾಗಬಹುದು, ಪರಸ್ಪರ ವ್ಯತ್ಯಾಸವಾಗಿ ಎಲ್ಲಾ ಜನರೂ ಹೋರಾಟ ಮಾಡತಕ್ಕ ದಾರಿಯಾಗಬಹುದ. ಇವತ್ತು ಭಾವೆ ಅವರ ಈ ಭೂದಾನ ಚಳುವಳಿ ವಿಫಲವಾಗಿದೆ ಎಂದು ಹೇಳದೇ ವಿಧಿ ಇಲ್ಲ. ನಾವು ಮೈಸೂರ ರಾಜ್ಯದಲ್ಲಿ ಕಾಗೋಡಿನಲ್ಲಿ ಭೂಮಿಗಾಗಿ ಒಂದು ಹೋರಾಟ ಮಾಡಿದೆವು. ಆಗ ಅಹಿಂಸಾತ್ಮಕವಾಗಿ ಭೂಮಿಯನ್ನು ಕೇಳುವುದಕ್ಕೆ ಹೋಗತಕ್ಕ ಅಥವಾ ವಿವಾದದ ವಿರುದ್ಧ ಹೋಗತಕ್ಕ ರೈತರನ್ನು ಸರ್ಕಾರದವರು ಹಿಡಿದು ಜೈಲಿಗೆ ಹಾಕುತ್ತಾ ಇದ್ದರು ಅದೇ ಸರಿಯಾದ ಮಾರ್ಗ ಎಂದು ಕೂಡ ಅನಿಸುತ್ತಾ ಇತ್ತು. ಆದರೆ ಮಾನ್ಯ ಸಚಿವರು ಭೂ ಸಮಸ್ಯೆಯನ್ನು ಬಗೆಹರಿಸದೇ ಶ್ರೀವಾನ್ ಭಾವೆ ಅವರ ಹೆಸರಿನಲ್ಲಿ ಈ ಭೂ ದಾನ ಯಜ್ಞ ಮಸೂದೆಯನ್ನು ತಂದು ನಮ್ಮ ಮುಂದೆ ಇಟ್ಟಿದ್ದಾರೆ, ಇದು ಒಂದು ದೊಡ್ಡ ವಿಪರ್ಯಾಸವನ್ನು ಸೂಚಿಸುತ್ತದೆ. ಕಾರಣವೇನೆಂದರೆ ಶ್ರೀ ಭಾವೆ ಅವರಿಗೆ ಒಂದು ಮಠಕಟ್ಟಿ ಇಡಬೇಕು ಭೂದಾನ ಯಜ್ಞ ಮಂಡಲಿ ಎಂದು ಭೂಮಿಯನ್ನು ದಾನವಾಗಿ ತೆಗೆದುಕೊಂಡು ಇಟ್ಟಿದ್ದೀರಿ. ಎಲ್ಲಾ ಮಠಗಳೂ ಹೀಗೆಯೇ ಹುಟ್ಟಿದ್ದು. ಶಂಕರಾಚಾರ್ಯರು ಮಹಾ ಅದ್ವೈತಿಗಳಾಗಿ ಈ ದೇಶದಲ್ಲಿ ಚಳುವಳಿ ಮಾಡಿದರು—ಅವರಿಗೆ ಮಠಗಳನ್ನು ಸ್ಥಾಪನೆ ಮಾಡಿದರು. ನಾವು ಈ ಕಾಲಕ್ಕೆ ಬಂದಮೇಲೆ ಶೃಂಗೇರಿ ಇನಾಂನ್ನು ಜಹಗಿರಿಯನ್ನು ರದ್ದು ಪಡಿಸಿದ್ದೇವೆ, ಕಾನೂನು ತಂದು. ಅದಾದ ನಂತರ ಪುನಃ ಶ್ರೀ ಭಾವೆ ಅವರ ಹೆಸರಿನಲ್ಲಿ ಒಂದು ಮಠವನ್ನು ಸ್ಥಾಪನೆ ಮಾಡುವುದಕ್ಕೆ ರೆವಿನ್ಯೂ ಸಚಿವರು ಕಾನೂನು ಮೂಲಕ ಹೋಗುತ್ತಾ ಇದ್ದಾರೆ. ಈ ಮಠಕ್ಕೆ ನಾವು ಉಂಬಳಿ ಕೊಡುತ್ತೇವೆ. ಅದು ಹೇಗೆ ಇರಬೇಕು ಅದಕ್ಕೆ ಯಾರ, ಅರ್ಹರು, ಯಾರನ್ನು ನೇಮಕ ಮಾಡಬೇಕು ಎಂದು ಹೇಳಿ ಹೊಸದಾಗಿ ಒಂದು ಮಠವನ್ನು ಸ್ಥಾಪನೆ ಮಾಡುವುದಕ್ಕೆ ಹೋಗುತ್ತಾ ಇದ್ದೇವೆ. ನಾನಾಗಲೇ ಹೇಳಿದೆ ಶ್ರೀ ಭಾವೆ ಅವರು ಯಾವಾಗಲೂ ಮಠ ಮತ್ತು ಒಂದು ಶಾಸನಬದ್ಧವಲ್ಲದ ಸಮಾಜದ ವಿರುದ್ಧ ಹೋರಾಡತಕ್ಕವರು ; ಅವರು ಯಾವತ್ತೂ ಸತತವಾದ ಸತ್ಯಾಗ್ರಹವನ್ನು ಇದಕ್ಕಾಗಿ ಮಾಡಿದವರು—ಅವರು ಕಾಂಚನ ಮುಕ್ತಿಯನ್ನು ಮಾಡಿಕೊಂಡಿದ್ದಾರೆ.

ಅಂಥವರು ಮೈಸೂರು ಸರ್ಕಾರಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಇದನ್ನು ಒಂದು ಮಠಮಾಡಿ ಇದಕ್ಕೆ ಸದಸ್ಯರನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆಂಬುದು ಬಹಳ ಆಶ್ಚರ್ಯಕರವಾದ ಮಾತು. ಎಲ್ಲಿ ಹಣವಿದ್ದರೆ ಅಲ್ಲಿ ಕಚ್ಚಾಟ ಬರುತ್ತದೆ ಅದಕ್ಕಾಗಿ ಈ ಸಮಿತಿಗಳನ್ನೇ ವಜಾಮಾಡಬೇಕೆಂದು ಹೇಳತಕ್ಕವರು ಅವರು. ಈಗ ಈ ಭೂಮಿಯನ್ನು ವಿತರಣೆಮಾಡುವ ಉದ್ದೇಶದಿಂದ ಈ ಒಂದು ಮಸೂದೆಯನ್ನು ತಂದು ಈ ವಿಚಾರವನ್ನು ಭಾವೆಯವರೇ ಹೀಗೆ ಮಾಡಬೇಕೆಂದು ಹೇಳಿದ್ದಾರೆ, ಇದಕ್ಕಾಗಿ ಒಂದು ಮಠ ಕಟ್ಟಬೇಕು, ಒಂದು ಮಂಡಲಿ ರಚಿಸಬೇಕು, ಇಂಥ ಒಂದು ಮಠಕಟ್ಟಿ, ಅದಕ್ಕೊಂದು ಮಂಡಲಿಯನ್ನು ರಚಿಸಿ, ಕಾನೂನು ಪ್ರಕಾರ ಅದರಲ್ಲಿ ರೆವಿನ್ಯೂ ಸಚಿವರೇ ಇರಬೇಕು ಅವರೇ ಅಧ್ಯಕ್ಷರಾಗಿರಬೇಕು, ಈ ತತ್ವದಮೇಲೆ ಈ ವಿತರಣೆ ಕಾರ್ಯ ನಡೆಯಬೇಕು ಎಂದು ಹೇಳುವುದು ಬಹಳ ವಿಪರ್ಯಾಸವಾದ ಮಾತು ; ಈ ಕಾನೂನಿಗೂ ಆ ಭೂಮಿ ಹಂಚತಕ್ಕದ್ದಕ್ಕೂ ಯಾವ ಸಂಬಂಧವೂ ಇಲ್ಲ. ಈಗ ಒಂದು ಹೊಸಮಾರ್ಗವನ್ನು ಸೃಷ್ಟಿಸಲು ನಾವು ಹೊರಟಿದ್ದೇವೆ. ಈ ಒಂದು ಉದ್ದೇಶದಿಂದ ಭೂಮಿ ವಿಲೇವಾರಿಯ ಕೆಲಸದಲ್ಲಿ ವಿಳಂಬವಾಗಿದೆ. ವಿನೋಬಾ ಭಾವೆಯವರ ಉದ್ದೇಶವಂತೂ ಸಫಲವಾಗಲಿಲ್ಲ. ಸಮಸ್ಯೆ ದಿನದಿನಕ್ಕೂ ಹದಗೆಡುತ್ತಿದೆ. ಭೂಹೀನರಿಗೆ ದರಖಾಸ್ತು ದಾನಮಾಡುತ್ತಿದ್ದೇನೆ ಎಂದು ಶ್ರೀ ಕೃಷ್ಣಪ್ಪನವರು ಹೇಳುತ್ತಿದ್ದರು......

ಶ್ರೀ ಎಂ. ವಿ. ಕೃಷ್ಣಪ್ಪ.—ದರಖಾಸ್ತು ದಾನವಲ್ಲ, ಪಟ್ಟಾದಾನ ಎಂದು ಹೇಳಿದ್ದೆ.

ಶ್ರೀ ಎಸ್. ಗೋಪಾಲಗೌಡ.—ಈ ದಿವಸ ಗೇಣಿದಾರರಾಗಿರತಕ್ಕ ಸಹಸ್ರಾರು ಜನ ರೈತರನ್ನು ಭೂಮಾಲಿಕರು ಹೊರದೂಡುತ್ತಿದ್ದಾರೆ. ಪಂಪು ಇತ್ಯಾದಿ ಯಾಂತ್ರಿಕ ಸೌಲಭ್ಯಗಳನ್ನು ಹೊಂದಿರತಕ್ಕ ನೂರಾರು ಎಕರೆ ಜಮೀನನ್ನು ಪಡೆದಿರುವಂಥ ಬಲಿಷ್ಠ ವರ್ಗವೊಂದನ್ನು ನಾವೀಗ ಸೃಷ್ಟಿಮಾಡುತ್ತಿದ್ದೇವೆ. ಒಂದೊಂದು ಹಳ್ಳಿಯಲ್ಲೂ ಅಮೇರಿಕನ್ ಟೈಪ್ ಕೃಷಿಗಾರರು ಹುಟ್ಟುತ್ತಿದ್ದಾರೆ. ನಾವು ಈ ದಿವಸ ಯಾವ ದಿಕ್ಕಿಗೆ ಹೋಗುತ್ತಿದ್ದೇವೋ ಎನ್ನುವುದು ಒಂದು ದಿಗ್ಭ್ರಮೆಯನ್ನು ಉಂಟುಮಾಡಿದೆ. ಈ ದಿವಸ ನಾವು ಇದನ್ನೆಲ್ಲ ಭಾವೆಯವರ ಮನಸ್ಸನ್ನು ಸಂತೋಷಪಡಿಸಲು ಹೀಗೆ ಮಾಡುತ್ತಿದ್ದೇವೆಯೋ ಅಥವಾ ಒಂದು ರೆವಿನ್ಯೂ ಲೆಕ್ಕಕ್ಕಾಗಿ ಇದನ್ನೆಲ್ಲ ಮಾಡುತ್ತಿದ್ದೇವೆಯೋ ಎಂಬುದನ್ನು ಅರ್ಥಮಾಡಿಕೊಳ್ಳುವುದೇ ಒಂದು ದೊಡ್ಡ ಪ್ರಶ್ನೆಯಾಗಿದೆ. ಇದರಲ್ಲಿ

ರಿಜಿಸ್ಟ್ರೇಷನ್ ಬಗ್ಗೆ ಕೆಲವು ವಿನಾಯಿತಿಗಳನ್ನು ಹೇಳಿದ್ದಾರೆ, ಇಂಥದಕ್ಕೆ ಖಂಡಿತ ಅವಕಾಶವಿರಬಾರದು. ಸ್ಟ್ಯಾಂಪ್ ಶುಲ್ಕ ಇತ್ಯಾದಿಗಳನ್ನು ವಿನಾಯಿತಿ ಕೊಡತಕ್ಕದ್ದೆಂದು ಹೇಳಿದೆ. ಇದೊಂದು ಇವರಲ್ಲಿ ವಿಶೇಷ. ಆದರೆ ಸರ್ಕಾರ ಕಂದಾಯವನ್ನು ಮಾಫಿಮಾಡುವುದಕ್ಕೆ ತಯಾರಿಲ್ಲ. ಹಾಗಿರುವಾಗ ಸರ್ಕಾರಕ್ಕೆ ಬರಬೇಕಾದ ಶುಲ್ಕವನ್ನೇಕೆ ಬಿಡಬೇಕು? ಇದನ್ನು ನೋಡಿದರೆ ನಾವೀಗ ಪುನಃ ಹಿಂದಕ್ಕೆ ಹೋಗುತ್ತಿದ್ದೇವೇನೋ ಅನ್ನುವಂತೆ ನನಗೆ ಭಾಸವಾಗುತ್ತಿದೆ. ಹೀಗೆಲ್ಲ ಇವರು ಮಾಡುತ್ತಾರೆಂದು ತಿಳಿದಿದ್ದರೆ ಖಂಡಿತ ಶೃಂಗೇರಿ ಜಹಗಿರಿಯ ಅಬಾಲಿಷನ್‌ಗೆ ನಾನು ಒಪ್ಪಿಗೆ ಕೊಡುತ್ತಿರಲಿಲ್ಲ.

Mr. SPEAKER.—The Hon'ble Member has already taken 35 minutes. Business Advisory Committee Report which he fixed their for Consideration of this Bill, has been adopted by this House. The Hon'ble Member is a party to it. It has been extended by one hour. Either he should adhere to the unit or leave the matter entirely to me.

ಶ್ರೀ ಎಸ್. ಗೋಪಾಲಗೌಡ.—ಇದು ಬಹಳ ವಿವಾದಾಸ್ಪದವಾದ ಮಸೂದೆ, ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದುತ್ತಮ. ಇಲ್ಲವೆ ಇದನ್ನು ಶ್ರೀ ಭಾವೆಯವರಿಗೆ ವಾಪಸ್ಸು ಕಳುಹಿಸಿ ಎಂದು ಹೇಳುತ್ತೇನೆ.

Mr. SPEAKER.—I will leave it to the House whether the Bill should be sent to Vinobhaji. (Laughter). I am concerned here about the time-factor.

Sri S. SIVAPPA.—We shall extend the time to some extent. Some controversial issues have arisen.

Mr. SPEAKER.—Then I have to find fault with the Business Advisory Committee. All-right. Would the House agree to the extension of the time by 1 hour?

HON'BLE MEMBER.—Yes.

5-00 P.M.

ಶ್ರೀ ಎಸ್. ಗೋಪಾಲಗೌಡ.—ಈ ಮಸೂದೆಯನ್ನು ಇರುವ ಹಾಗೆ ಅಂಗೀಕಾರಮಾಡಿ ಕಾನೂನಿನ ಕಡತಕ್ಕೆ ಏರಿಸುವುದಾದರೆ ನಾವು ನಮ್ಮ ಜವಾಬುದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಕಾರಣವೇನೆಂದರೆ ಅವರ ದೃಷ್ಟಿಯಿಂದ 22, 23, ಸಾವಿರ ಎಕರೆಗಳಷ್ಟು ಜಮೀನನ್ನು ಅತಂತ್ರವಾದ ಹಿಡುವಳಿದಾರರುಗಳ ವಶದಲ್ಲಿರುವುದನ್ನು ಸರಕಾರದ ಮೂಲಕ ಒಳಪಡಿಸಿಕೊಳ್ಳಬೇಕೆನ್ನುವುದು. ಅಲ್ಲದೆ ಸರಕಾರದವರು ಭೂದಾನ ಚಳುವಳಿ ಸಮಿತಿಯವರನ್ನು ಕೇಳಿ ಇದನ್ನು ಮಾಡಿದ್ದಾರೆಯೇ? ಅಲ್ಲದೆ ಇದರ ವಿಷಯದಲ್ಲಿ ಪೂರ್ವಾಪರ ಯೋಚನೆ ಮಾಡಿಲ್ಲ. ಆಚಾರ್ಯ ಭಾವೆಯವರು ಇದರ ಬಗ್ಗೆ ಏನು ಹೇಳಬೇಕೆಂದಿದ್ದಾರೆ ಅವರ ಅಭಿಪ್ರಾಯವನ್ನೂ ತಿಳಿದುಕೊಂಡಿಲ್ಲ. ಆದರೆ ಅವರ ಹೆಸರಿನಲ್ಲಿ ಭೂದಾನ ಚಳುವಳಿಯ ಸಮಿತಿಯ ಮೂಲಕ ಸಂಪಾದನೆಯಾಗತಕ್ಕ ಭೂಮಿಯನ್ನು ಒಂದು ಟ್ರಸ್ಟು ಮೂಲಕ ಧರ್ಮದರ್ಶಿಗಳನ್ನು ನೇಮಕ ಮಾಡಬೇಕೆಂದು ಏನು ಇದರಲ್ಲಿ ಇಟ್ಟುಕೊಂಡಿದ್ದಾರೋ ಅಂತಹ ಒಂದು ಮಂಡಲಿಯನ್ನು ಮಾಡಿಕೊಂಡು ಅವರ ಮೂಲಕ ಭೂಮಿಯನ್ನು ಹಂಚಿಕೊಡುವ ಅಧಿಕಾರವನ್ನು ಕೊಟ್ಟಿರುವುದು ಸಮಂಜಸವಾಗುವುದಿಲ್ಲ. ಅದೂ ಇಂತಹ ಸನ್ನಿವೇಶದಲ್ಲಿ ಭೂಮಿಯ ಸಮಸ್ಯೆ ಹದಗೆಟ್ಟು ಕುಳಿತಿರುವಾಗ, ಖಚಿತವಾದ ಯಾವ ಹೆಜ್ಜೆಯನ್ನೂ ಇಡದೇ ಇರುವಾಗ, ಭೂಮಿಯ ಹಂಚಿಕೆಯೇ ಸರಿಸಮವಾಗಿ ಆಗದೇ ಇರುವಾಗ, ಇನಾಂ ಜಹಗೀರುಗಳನ್ನು ರದ್ದುಮಾಡಿರುವಾಗ ಈ ಹೊಸ ಇನಾಂ ಜಹಗೀರುಗಳನ್ನು ನಾವು ಸೃಷ್ಟಿ ಮಾಡಬೇಕೇ ಎನ್ನುವುದು ಬಹು ಮುಖ್ಯವಾದ ಪ್ರಶ್ನೆ. ಆಚಾರ್ಯ ಭಾವೆಯವರ ಬಗ್ಗೆ ನನಗೂ ಬಹಳ ಗೌರವವಿದೆ. ಅವರ ಚಳುವಳಿಯ ಬಗ್ಗೆ ನಾನೂ ಗೌರವವನ್ನು ಹೊಂದಿದ್ದೇನೆ. ಆದರೆ ಆ ಮಾರ್ಗದಲ್ಲಿರುವ ಅಲೌಕಿಕವಾದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ದೃಢವಾದ ನಂಬಿಕೆ. ಆದರೆ ಅವರು ಹೋಗುತ್ತಿರುವ ಮಾರ್ಗದಂತೆ ಸಂಪತ್ತನ್ನು ಗಳಿಸಲು ಸಾಧ್ಯವಿಲ್ಲ. ಅವರು ಹೇಳುವಂತಹ ಮನುಷ್ಯರನ್ನೂ ಸೃಷ್ಟಿ ಮಾಡುವುದೂ ಸಾಧ್ಯವಿಲ್ಲ. ಅದನ್ನು ನಾವು ಚರ್ಚಿಸುವುದು ಉಚಿತವಲ್ಲ ಮತ್ತು ಅದು ಅಪ್ರಕೃತ. ಅಹಿಂಸೆಯ

(ಶ್ರೀ ಎಸ್. ಗೋಪಾಲಗೌಡ)

ಆಧಾರದಮೇಲೆ ನಡೆಯುತ್ತಿರುವ ಈ ಚಳುವಳಿಯಲ್ಲಿ ಹಿಂಸೆಯಿಂದ ಒತ್ತಾಯ ತರುವುದನ್ನು ತೊರೆದು ಹಾಕಲು ಸಾಧ್ಯವಿಲ್ಲ. ಶ್ರೀ ಕೃಷ್ಣನೂ ಕೂಡ ಯುದ್ಧವನ್ನು ತಪ್ಪಿಸಲಿಕ್ಕೆ ಆಗಲಿಲ್ಲ. ಕುರುಕ್ಷೇತ್ರ ನಡೆದೇ ನಡೆಯಿತು. ಆದುದರಿಂದ ಇವೊತ್ತು ಉಂಟಾಗಿರತಕ್ಕಂಥಹ ಭೂಮಿಯ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಅವರು ಹೇಳುವುದು ಒಂದು ಪವಾಡ. ಭೂಮಿಯ ಸಮಸ್ಯೆ ಪವಾಡದಂತೆ ನಡೆಯುವುದಿಲ್ಲ ಎನ್ನುವುದು ಎಲ್ಲರೂ ತಿಳಿದು ಹೇಳುವ ಮಾತು. ಇದರ ಬಗ್ಗೆ ಆಚಾರ್ಯ ಭಾವೆಯವರೊಡನೆ ಸರಕಾರದವರು ವೈಯ್ಯಕ್ತಿಕವಾಗಿ ಕರಿತು ಮಾತನಾಡ ಬೇಕು. ನಮ್ಮ ಅಭಿಪ್ರಾಯಗಳನ್ನು ಅವರಿಗೂ ತಿಳಿಸಬೇಕು. ಚಳುವಳಿ ವಿಫಲವಾಗಿದೆ ಎಂದು ಅವರು ಹೇಳುವ ಪ್ರಕಾರ ಮುಂದೆ ಇದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ನಾವು ತಿಳಿಯಕೊಳ್ಳಬೇಕಾಗಿದೆ. ಇದನ್ನು ತಾವಿಲ್ಲಿ ಸ್ವಲ್ಪ ವಿಚಾರ ಮಾಡಬೇಕು. ಹೊಸದಾಗಿ ಭೂದಾನದ ಗೇಣೀದಾರನೆಂದು ಒಬ್ಬರನ್ನು ಈಗಿರುವ ಇತರ ಗೇಣಿದಾರರೊಂದಿಗೆ ಸೃಷ್ಟಿ ಮಾಡಿದ್ದಾರೆ. ಈ ಹೊಸ ಭೂದಾನದ ಗೇಣಿದಾರ ಯಾವಾದರೂ ಭೂದಾನಕ್ಕಾಗಿ ಕೊಟ್ಟಿ ರುವ ಭೂಮಿಯನ್ನು ಉಪಯೋಗಿಸುತ್ತಿರುವಾಗ ಅಂತಹ ಬಡ ರೈತನ ಒಕ್ಕಲನ್ನು ಕಾನೂನ್ನು ಪ್ರಕಾರ ರದ್ದುಮಾಡುವಾಗ ಅವನನ್ನು ಬಿಡಿಸಬಹುದು ಎಂದು ಇದರಲ್ಲಿದೆ. ಯಾವ ಒಂದು ಶ್ರೇಯಸ್ಸಿಗೋಸ್ಕರ ಆಚಾರ್ಯ ಭಾವೆಯವರು ಇಡೀ ದೇಶದಲ್ಲಿ ಕಾಲ್ನಡಿಗೆಯಲ್ಲೇ ಓಡಾಡುತ್ತಿ ದ್ದಾರೋ ಅಂತಹವರ ತತ್ವಕ್ಕೇ ವಿರೋಧವಾಗಿ ನಾವು ಕಾನೂನುಗಳನ್ನು ಮಾಡಿ ಇದ ರೊಳಗೆ ಇಂತಹ ವಿಧಿಗಳನ್ನೂ ಪ್ರಕರಣಗಳನ್ನೂ ಹಾಕಿದ್ದೇವೆ. ಖಂಡಿತವಾಗಿಯೂ ಇದು ಪಾಸಾ ದರೆ ಈ ಶಾಸನದಿಂದ ಸರ್ವೋದಯ ಸಮಾಜವಾಗಬೇಕು ಎನ್ನುವ ಉದ್ದೇಶ ನೆರವೇರುತ್ತದೆಯೆ? 'ಕೃಷ್ಣಾರ್ಪಣಮಸ್ತು' ಎನ್ನುವಂತೆ ಇದೆ ಇದರ ತತ್ವ. ದೇಶದಲ್ಲಿ ಎಲ್ಲಿಯೂ ಇಲ್ಲದಂತಹ ಪದ್ಧತಿ ಇಲ್ಲಿ ಕಂಡುಬರುತ್ತಿದೆ ಎಂದು ನಾನು ಹೇಳಬೇಕಾಗಿದೆ. ಭಾವೆಯವರೇನು ಹೇಳಿದ್ದಾರೆ?

This is for Indra, not for me. ಇಂದ್ರನಿಗೇ ಕೃಷ್ಣಾರ್ಪಣ ಎಂದು ಮಾಡಿಸಿ ನಾವು ಬದುಕಬೇಕು. ಇದು ಒಂದು ದೊಡ್ಡ ತತ್ವ.

Mr. SPEAKER.—Reading of Books is not permitted. But the hon'ble member can mention the same in his own words.

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ ವಾಸ್ತವವಾಗಿ ಏನಿದೆ ಎಂದರೆ—

> "This is an ideal, but what do we find actually? The highly expensive administrative and other departments of the Government are known as 'services' and there are services like Civil services, Medical Services and Educational services. The officials of the Civil services are paid four-figured salary, still their masters......"

Mr. SPEAKER.—The hon'ble member can put the same in his own words. Reading of Books is not permitted.

ಆದ್ದರಿಂದ ಈ ಮಸೂದೆಯನ್ನು ನಾನು ಕಟುವಾಗಿ ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಈ ಮಸೂದೆಯನ್ನು ನೀವು, ನಾವು ಕಾನೂನಾಗುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅದು ಒಂದು ತಪ್ಪು ಮಾಡಿದ ಹಾಗಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸು ತ್ತೇನೆ.

† ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು II).—ಸ್ವಾಮಿ, ಈ ಭೂದಾನ ಯಜ್ಞದ ಮಸೂದೆ ಯನ್ನು ಮೊದಲಿಗೆ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ರೆವೆನ್ಯೂ ಮಂತ್ರಿಗಳನ್ನು ಕೇಳಿ ಕೊಳ್ಳುತ್ತೇನೆ. ಏಕೆಂದರೆ ಶಿರೋನಾಮೆ ಏನಿದೆಯೋ ಅದೂ ಕೂಡ ಈ ವಿಧೇಯಕದ ತತ್ವಕ್ಕೆ ಅನುಗುಣವಾಗಿ ಇಲ್ಲ. ಯಜ್ಞ ಎಂಬ ಪದಕ್ಕೂ ದಾನ ಎಂಬ ಶಬ್ದಕ್ಕೂ ಯಾವ ಅರ್ಥವನ್ನು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಕೊಟ್ಟಿದ್ದಾರೆನ್ನುವುದು ನನಗೆ ಹೇಳಲಿಕ್ಕೆ ಬರುವುದಿಲ್ಲ. ಇದು ನಿಜ ವಾಗಿಯೂ ಒಂದು ಸಣ್ಣ ಬಿಲ್ಲು ಎಂದು ಹೇಳುವುದು ಒಂದು ವ್ಯಕ್ತಿಯ ಕಲ್ಪನೆ ಮತ್ತು ಆಸೆಗಳಿಗೆ ವ್ಯತಿರಿಕ್ತವಾಗಿದೆ ಎನ್ನುವುದು ಈಗಾಗಲೇ ವ್ಯಕ್ತವಾಗಿದೆ. ಇದು ನಿಜವಾಗಿಯೂ ಅನ್ಯಾಯ

ಪಾದುದು ಮತ್ತು ಇದನ್ನು ತರುವುದೂ ಸರಿಯಲ್ಲ. ಮಾನಸಿಕ ಪರಿವರ್ತನೆಯಾಗುವ ಈ ಒಂದು ಹೊಸ ಸಮಾಜದಲ್ಲಿ ಇದರ ವ್ಯಾಪ್ತಿಯನ್ನು ತೆಗೆದುಕೊಂಡು ಒಂದು ಕಾನೂನಾಗಿ ಮಾಡಿ ಈ ರಾಜ್ಯದಲ್ಲಿ ಪ್ರಾರಂಭ ಮಾಡುವುದು ಎಂದು ಹೇಳಿದರೆ ಇದು ಸರ್ವಥಾ ಸರಿಯಲ್ಲ. ನ್ಯಾಯಕ್ಕೂ, ತತ್ವಕ್ಕೂ ಸರಿಯಲ್ಲ. ಇದನ್ನು ಪಾಸು ಮಾಡಿದರೆ ಇದು ಒಂದು ದೊಡ್ಡ ಅಪರಾಧ ಮಾಡಿದಂತಾಗುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಯಾವ ಉದ್ದೇಶದಿಂದ ಇದನ್ನು ಆಕ್ಷೇಪಣೆ ಮಾಡಿದರು ಎನ್ನುವುದರ ಬಗೆಗೆ ಈಗತಾನೇ ಮಾತನಾಡಿದ ಮಿತ್ರರು ಆಗಲೇ ವಿವರಿಸಿದರು. ಈ ದೇಶದಲ್ಲಿ ಜನತೆಗೆ ಭೂಮಿಯ ಒಂದು ಆಸೆ ಹುಟ್ಟಿತ್ತು ಮತ್ತು ಅವರ ಒಂದು ಪ್ರಚಾರವೂ ಹರಡಿತ್ತು. ಆಗ ಭೂಮಿಯ ಹಾವಳಿಯನ್ನು ತಪ್ಪಿಸಲು ವಿನೋಬಾ ಬಾವೆಯವರು ಒಂದು ದೊಡ್ಡ ಚಳವಳಿಯ ರೂಪದಲ್ಲಿ ಈ ದೇಶದಲ್ಲಿ ಹರಡಿದರು. ಆ ರೀತಿಯಾದ ಒಂದು ಕಾರ್ಯಕ್ರಮವನ್ನು ತೆಲಂಗಾಣದಲ್ಲಿ ಹಾಕಿಕೊಂಡು ಭೂಮಿಯನ್ನು ಶೇಖರಣೆಮಾಡಿ ಭೂಮಿಯಿಲ್ಲದವರಿಗೆ ಭೂಮಿಯನ್ನು ಹಂಚುವಿಕೆಯ ಕಾರ್ಯ ಕೈಗೊಂಡರು. ನಮ್ಮ ಕ್ಷೇತ್ರದಲ್ಲಿಯೂ ಅವರು ಪ್ರಯಾಣ ಮಾಡಿ ಸಂಚರಿಸಿದಾಗ ನಾನೂ ಕೂಡ ಅವರೊಡನೆ ತುಂಬಾ ಕೆಲಸ ಮಾಡಿದ್ದೆ. ನಮ್ಮ ಹಳ್ಳಿಯ ಮುಖಂಡರುಗಳೊಡನೆ ಅವರು ಪ್ರಯಾಣಮಾಡಿದರು. ವಿನೋಬಾಜೀಯವರು ಬಂದದ್ದಾಗ ನಮ್ಮ ಮೈಸೂರು ರಾಜ್ಯದಿಂದಲೂ ಕರ್ಣಾಟಕದ ಬಾರ್ಡರನ್ನು ತಲಪಬೇಕೆಂದು ರಾಜ್ಯದ ಮಂತ್ರಿಗಳು ಅವರು ಪ್ರವೇಶ ಮಾಡಿದಾಗ ದಕ್ಷಿಣ ಕನ್ನಡ ಜಿಲ್ಲೆಯವರಿಗೂ ಬಂದಿದ್ದರು. ಅಲ್ಲಿಯೂ ಕೂಡ ಮೈಸೂರು ಸರಕಾರದ ವತಿಯಿಂದ ಅವರಿಗೆ ಭೂಮಿಯನ್ನು ದಾನವಾಗಿ ಕೊಡಲಾಯಿತು ಮತ್ತೆ ನಾನು ಕೂಡ ಅವರೊಡನೆಯೇ ಮಾಣಿಯವರೆಗೂ ಬಂದಿದ್ದೆ. ಅವರನ್ನು ಅಗಲಿ ಬಿಟ್ಟು ಬಂದಾಗ ಅವರು ಹೇಳಿದ ಮಾತುಗಳು ಈಗಲೂ ನನಗೆ ನೆನಪಿದೆ. ಅದೇನೆಂದರೆ, "ಈ ಭೂದಾನ ಚಳುವಳಿಯಲ್ಲಿ ನಿಜವಾಗಿಯೂ ಶ್ರೀಮಂತರನ್ನು, ಭೂ ಮಾಲೀಕರನ್ನು ಒಳಗೊಂಡು ಒಂದು ಉದಾತ್ತವಾದ ಧ್ಯೇಯವನ್ನಿಟ್ಟುಕೊಂಡು ಕೆಲಸ ಮಾಡುವುದು ಅಗತ್ಯ. ನಾನೇನೋ ಭೂಮಿಯನ್ನು ಬೇಡಿ ಭೂಮಿಯಿಲ್ಲದವರಿಗೆ ಭೂಮಿ ಹಂಚುವ ಕೆಲಸವನ್ನು ಕೈಗೊಳ್ಳುತ್ತಿರುವುದು ಒಂದು ದೊಡ್ಡ ಮಹತ್ವದ ಕೆಲಸ. ಇದರಿಂದ ಜನತೆಯಲ್ಲಿ ಒಂದು ಹೊಸ ಜಾಗೃತಿ ಉಂಟುಮಾಡಿ ಭೂಮಿಯಿಲ್ಲದವರಿಗೆ ಸರಿಯಾಗಿ ಭೂಮಿ ಸಿಕ್ಕಿದರೆ ಈ ಕಾರ್ಯ ಸಫಲವಾದೀತು."

ಇದು ಹೀಗೆ ಆಗದೇ ಇದ್ದರೆ ಜನತೆಯ ಬಲಕ್ಕೆ ಶ್ರೀಮಂತರು ತಲೆಬಾಗಬೇಕಾದೀತು ಎಂದು ಅವರು ಹೇಳಿದ್ದಾರೆ. ಅವರು ಹೀಗೆ ಹೇಳಿದ್ದು 1958ರಲ್ಲಿ. ಇಲ್ಲಿಯವರೆಗೆ ಎಷ್ಟೋ ಸಮಯ ಕಳೆಯಿತು. ನಮ್ಮ ರಾಜ್ಯದಲ್ಲಿ ಅವರು ಪಾದಯಾತ್ರೆ ಮಾಡಿದ ಕಾಲದಲ್ಲಿ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತಾ ಭೂ ಸುಧಾರಣೆ ಮಸೂದೆ ಬೇಗನೆ ಜಾರಿಗೆ ತರಬೇಕೆಂದು ಅವರು ಒತ್ತಾಯ ಪೂರ್ವಕ ಹೇಳಿದ್ದಾರೆ ? ಮಾನಸಿಕ ಪರಿವರ್ತನೆಯಾಗುವುದು ಅಗತ್ಯ ಎಂದು ಹೇಳಿದ್ದಾರೆ. ಆದರೆ ನಮ್ಮ ಸರಕಾರ ಭೂ ಸುಧಾರಣೆಯ ಮಸೂದೆಯನ್ನು ಹಿಂದೆ ಹಾಕಿದ್ದಾರೆ. ಇನ್ನೂ ಕಾರ್ಯಗತ ಮಾಡಿಲ್ಲ, ಜಾರಿಗೆ ತರಲು ಪ್ರಯತ್ನ ಮಾಡಿಲ್ಲ. ಅವರ ತತ್ವ ಅವರ ಆಶೆಗೆ ವಿರುದ್ಧವಾದ ಈ ಮಸೂದೆಯನ್ನು ಅವರ ಒಂದು ದೊಡ್ಡ ಹೆಸರಿನಲ್ಲಿ ಈಗ ಸರಕಾರದವರು ತಂದಿದ್ದಾರೆ. ಇದು ಕಾಲಕ್ಕೆ ಅನುಗುಣವಾಗಿಲ್ಲ ಎಂದು ಹೇಳಬಹುದು. ದಾನ ಎಂಬುದು ಯಾವಾಗಲೂ [illegible]ಲರಾಮಗಿರಿಯ ಚಿಹ್ನೆಯಾಗಿದೆ. ಈ ದಾನ ಯಾರಿಂದ ಯಾರಿಗೆ ಕೊಡಬೇಕು ? ಕೈ ಇಲ್ಲದವರಿಗೆ ಬುದ್ಧಿಯಿಲ್ಲದವರಿಗೆ ಕೊಡಬೇಕೆ ? ದೊಡ್ಡ ವ್ಯಕ್ತಿಯ ಹೆಸರಿನಲ್ಲಿ ಈ ಕಾನೂನು ತಂದಿರುವುದು ಈಗಿನ ಸಮಯಕ್ಕೆ ಅನುಗುಣವಾಗಿಲ್ಲ ಜನತೆಯನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ಕಾಮರಾಜ ನಾಡರರ ಯೋಜನೆ ಎಲ್ಲರ ಮುಂದೆ ಇರುವಾಗ್ಗೆ ಮಂತ್ರಿಮಂಡಳ ಸಂಕುಚಿತ ಪಡಿಸುವ ಕಾರ್ಯ ಮಾಡುತ್ತಿಲ್ಲ. ಆದರೆ ಈ ಕಾನೂನು ತಂದರೆ ನಿಮ್ಮನ್ನು ಯಾರು ನಂಬಬೇಕು ? ಈಗಿನ ಪರಿಸ್ಥಿತಿಯಲ್ಲಿ ಎಲ್ಲರಿಗೆ ಬೇಕಾಗಿರುವುದು ಭೂ ಸುಧಾರಣೆ ಮಸೂದೆ. ಅದನ್ನು ಜಾರಿಗೆ ತಂದು ಜನತೆಗೆ ಅನುಕೂಲ ಮಾಡಿಕೊಡಬೇಕು. ಉಳುವವನೇ ಭೂಮಿಯ ಒಡೆಯನಾಗಬೇಕು. ನಾನು ಹೇಳುವುದು ಇಷ್ಟೆ. ದೇವರಲ್ಲಿ ಸತ್ಯ ಇರಬೇಕು. ಮೂರ್ತಿ ಮುಖ್ಯವಲ್ಲ. ಈಗ ಈ ಭೂದಾನ ಯಜ್ಞ ಮಸೂದೆ ತಂದಿರುವುದು ಸರಿಯಲ್ಲ. ಈ ಮಸೂದೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Sri B. R. SUNTHANKAR (Belgaum I).—Mr. Speaker, it is very difficult to support this Bill though it is well-intentioned. Sir, I have many doubts regarding this Bill and its working. Sir, I doubt very much whether this Bill or the principle of this Bill would fit in with the

(SRI B. R. SUNTHANKAR)

basic ideology of Bhoodan, because Bhoodan is a voluntary and spontaneous movement. The spotaneity of the movement is the main feature of this movement. And this Bhoodan as it was originally sponsored was to take place without the help or aid of the Government or any law. That was the original intention, that was the original motive of this movement. But, now Sir, Bhoodan is required to take resort to law and it looks that there is something very wrong with this Bhoodan movement and there must be some flaw to some defect in this Bhoodan movement. That is why this movement has to depend upon the assistance of law. That is what it looks. Sir, as regards this Bhoodan movement, though I do not agree with the ideology behind it, I was one of those who welcomed this Bhoodan originally when it was started, because it had raised high hopes and expectations in our minds. If this movement had been successfull, it would have worked out a silent revolution in this country. From that point, I was one of those who welcomed this movement. But looking at the working of the movement during the last twelve years, we are forced to say that this movement though it has not failed, has not met with the success it was expected to attain. This movement was started on 18-4-1951 by Acharya Vinoba Bhave at Pochampalli in Andhra and during the last twelve years, since the inception of this movement, the total land that was obtained was 41,63,116 acres. That was the total land that was collected by this Bhoodan movement. Out of this land up-till-now, the land that was distributed amounted to 11, 33, 816 acres—about 25 per cent of the land was distributed among the landless, and unfortunately out of these, 41 lakhs of acres, 11,90,450 acres of land were struck off as land which cannot be distributed owing to various reasons that means nearly. 25 percent of the land was useless. And what remains now ? Only 18,32,850 acres of Bhoodan remains to be distributed. In this State as the Hon'ble Minister stated, only 22,000 acres of land were obtained under this movement, and so in this State particularly, the problem is not great. Of the total Bhoodan land, half the land was obtained in Bihar; and in recent years, particularly after 1957 the movement has greatly slowed down and latterly. It has come to a stand still—I am not wrong if I say that. We do not know what will be the future of this movement. So, taking a survey of the work for the last 12 years, it looks as though this movement has failed, at least partially it has failed. This movement expected to work out a psychological revolution, phylosophical revolution in the minds of the people.

It has not done that ; it has not reached the extent to which it was expected to reach. So the objective of this movement has not been achieved.

About the Bhoodan Board, is will be instituted like other Boards—the Khadi Board and other Boards. This will be a grazing ground for the political unemployed from the ruling party. The worst feature of this Board will be that the Chairman and the Members shall be appointed

by Acharya Vinoba Bhave. If they are to resign, Acharya Vinoba's consent is required. Looking to the whole nature of the Bill, it depends upon the whims and will of a particular individual.........

Sri M. V. KRISHNAPPA.—Whom you respect and revere.

Sri B. R. SUNTHANKAR.—I am not speaking out of any disregard for Sri Acharya Vinoba. With all due respect to him, I say that a law should not depend upon an individal, because a statute is a statue for the whole State and however great he may be, he should not be identified with the State. We are superceding the law and we are placing the powers in the hands of an individual. That is the most objectionable feature of this legislation.

This land will be distributed to the landless. The lot of the agricultural labour or landless people is very pitiable. Only distributing lands to them will not do. They may require other help—technical assistance, financial assistance. Because the landless people will not be in a position to cultivate the lands of their own accord. They will require such outside assistance, financial, technical by way of implements, fertilisers, subsidies, but there is no provision in this Bill to see that the landless people to whom lands are distributed will get such assistance. The Board will have to provide specifically for such assistance to those to whom lands are distributed.

Sub-clause (2) of clause 19 is also highly objectionable, as has already been pointed by the members who spoke before me. With these words, I close my speech.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದಿರಿ).—ಸನ್ಮಾನ್ಯ ಅಧ್ಯಕ್ಷರೆ, ಪೂಜ್ಯ ವಿನೋಬಾಜಿಯವರು ಈ ಚಳುವಳಿಯನ್ನು ಆರಂಭಿಸಿದ ಉದ್ದೇಶವಾದರೂ ಹಿಂದೂಸ್ತಾನ ದೇಶದ ಜನರ ಹೃದಯ ಪರಿವರ್ತನೆ ಮಾಡಬೇಕೆಂದು; ಎಲ್ಲ ರಂಗದಲ್ಲಿಯೂ ಕೂಡ ಜನರು ತಮ್ಮ ಸ್ವಾರ್ಥವನ್ನು ಬಿಟ್ಟು, ತಮಗಿಂತ ದುರ್ಬಲರಾದ ಜನತೆಯ ಹಿತಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಬೇಕೆಂದು. ಅವರು ಜನ ಸಾಮಾನ್ಯರಹಿತಕ್ಕಾಗಿ, ಸಂಪತ್ತುಗಳನೆಲ್ಲಾ, ಸರ್ವಸವನ್ನೂ ಬಿಟ್ಟುಬಿಡಬೇಕೆಂಬ ಉದ್ದೇಶದಿಂದ ಈ ಚಳುವಳಿಯನ್ನ ಆರಂಭಿಸಿದರು. ಮೇಲಾಗಿ, ಭೂಮಿಗಾಗಿ ಅಥವಾ ಸ್ವತ್ತಿಗಾಗಿ ರಕ್ತ ಕ್ರಾಂತಿಯಾಗಬಾರದೆಂದು ಅವರ ಉದ್ದೇಶ. ಅದನ್ನು ತಪ್ಪಿಸಲು ಜನರು ಸಹ ಒಳ್ಳೆಯ ನೀತಿಯನ್ನು ತಮ್ಮ ದಿನಚರಿ ಜೀವನದಲ್ಲಿ ಅನುಸರಿಸಬೇಕೆಂದು ಬೋಧಿಸಿದರು. ಈ ಧ್ಯೇಯಕ್ಕೆ ಈ ಚಳುವಳಿಯನ್ನು ಆರಂಭಿಸಿದರು ಎಂದು ಸ್ಪಷ್ಟವಾಗಿದೆ. ಅವರು ಕೇರಳದಿಂದ ಮಂಗಳೂರಿಗೆ ಬರುವ ಸಂದರ್ಭದಲ್ಲಿ ನಾವು ಗಡಿಯಲ್ಲಿ, ಹಲವು ಮಂತ್ರಿಗಳೊಂದಿಗೆ ಸ್ವಾಗತಿಸುವುದಕ್ಕೆ ಹೋಗಿದ್ದೆವು ಆಗ ಅವರ ಭಾಷಣವನ್ನು ಕೇಳಿದ್ದೇವೆ ಮತ್ತು ಅದರಿಂದ ಏನು ಪರಿಣಾಮವಾಗುತ್ತದೆಂಬುದನ್ನೂ ಕೂಡ ಸ್ವಲ್ಪ ಮಟ್ಟಿಗೆ ತಿಳಿದು ಕೊಂಡಿದ್ದೇನೆ. ಅವರು ಅಷ್ಟು ಉದಾತ್ತವಾದ ಧ್ಯೇಯವನ್ನಿಟ್ಟು ಕೊಂಡಿದ್ದಾರೆ. ಆದರೆ ಆ ಧ್ಯೇಯದ ಸಾಧನೆಗಾಗಿ ಜನರು ಮುಂದೆ ಬರಲಿಲ್ಲ. ನಮ್ಮ ಸ್ನೇಹಿತರಾದ ಶ್ರೀಮಾನ್ ಸುಂಠಣಕರರು ಕೆಲವು ಅಂಕೆ ಸಂಖ್ಯೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿ ಕೆಲವರು ತಮಗೆ ಬೇಡವಾದ ಜಮೀನನ್ನು ಬಿಟ್ಟಿದ್ದಾರೆ; ಕೆಲವರು ತಮಗೆ ಹೆಚ್ಚಾಗಿದ್ದ ಜಮೀನನ್ನು ಹೆಸರು ಗಳಿಸುವ ಉದ್ದೇಶದಿಂದ ಬಿಟ್ಟುಕೊಟ್ಟಿದ್ದಾರೆ. ಇನ್ನೂ ಕೆಲವರು ನಿಜವಾಗಿ ತ್ಯಾಗ ಬುದ್ಧಿಯಿಂದ ತಮ್ಮ ಅಲ್ಪ ಸ್ವಲ್ಪ ಭೂಮಿಯನ್ನು ಅವರಿಗೆ ದಾನವಾಗಿ ಕೊಟ್ಟಿದ್ದರೂ ಅವರಿಗೆ ನಿಜವಾದ ಹೃದಯ ಪರಿವರ್ತನೆಯಾಗಿಲ್ಲ. ಏಕೆಂದರೆ ವಿನೋಭಾಜಿಯವರ ತತ್ವದಲ್ಲಿ ಕೇವಲ 10 ಎಕರೆ, 20-30 ಎಕರೆ ಭೂದಾನ ಹೇಳಿಲ್ಲ; ಗ್ರಾಮದಾನ, ಸ್ವತ್ತುದಾನ, ಮತ್ತು ತಮ್ಮೆಲ್ಲರುವ ಸರ್ವಸ್ವವನ್ನೂ ದಾನಮಾಡುವ ತತ್ವ ಅವರ ಯೋಜನೆಯಲ್ಲಿ ಅಡಕವಾಗಿದೆ. ಸಾರ್ವಜನಿಕರೆಲ್ಲಾ ಸೇರಿಕೊಂಡು ಅವರ ಸುಖವನ್ನು ಸಾರ್ವತ್ರಿಕವಾಗಿ ಅನುಭವಿಸಬೇಕೆಂಬುದು ಅವರ ಮೂಲ ತತ್ವ. ಮುಖ್ಯವಾಗಿ ಸ್ವಾತಂತ್ರ್ಯ ಸಿಕ್ಕಿದ ಮೇಲೆ, ಇವತ್ತು ದೇಶದ ಸರ್ವಸ್ವತ್ತೂ ಇಲ್ಲಿಯ ಜನತೆಯದು. ಅದು ಜನತೆಯ ಹಿತಕ್ಕಾಗಿ ಉಪಯೋಗವಾಗಬೇಕು, ಅದು ಎಲ್ಲರಿಗೂ ಸುಖ ಜೀವನವನ್ನು ಕಲ್ಪಿಸಿ

(ಶ್ರೀ ಗೋಪಾಲ ಸಾಲೆನ್ನ)

ಕೊಡಬೇಕು ಈ ಮುಖ್ಯ ಧ್ಯೇಯವನ್ನು ಎಲ್ಲರೂ ಒಪ್ಪಿಕೊಂಡಿದ್ದರೂ ಆ ಪ್ರಕಾರವಾದ ಕೈಯಲ್ಲಿ ಹಿಡಿದುಕೊಂಡು, ಆಡಳಿತ ಪಕ್ಷವು ಹಲವಾರು ವರ್ಷಗಳ ಆಳ್ವಿಕೆಯಿಂದ ಅದನ್ನು ಜಾರಿಗೆ ತರಲಿಕ್ಕೆ ಆಗಲಿಲ್ಲ. ಅವರು, ಕಾಯಿದೆ ಕೇವಲ ಕಾಯಿದೆ ಮಾತ್ರವಾಗಿ ಉಳಿದಿದೆ ಕಾಯಿಯಿಂದಲೇ ಜನರ ಹೃದಯುವನ್ನು ಪರಿವರ್ತನೆ ಮಾಡುವುದಕ್ಕಾಗುವುದಿಲ್ಲ ಎಂಬ ದೃಷ್ಟಿಯಿಂದ ಧಾರ್ಮಿಕ ಚಳುವಳಿಯನ್ನು ದೇಶದ ಮುಂದಿಟ್ಟರು. ಇದಕ್ಕೆ ಸಾಕಷ್ಟು ಸ್ವಾಗತ ಸಿಕ್ಕಲಿಲ್ಲ. ಅದು ಸಂಪೂರ್ಣ ಪರಾಜಯ ಹೊಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಜನರು ಅವರು ಹೇಳಿದ ರೀತಿಯಲ್ಲಿ ಮುಂದೆ ಬಂದು ಗ್ರಾಮಗಳನ್ನು ದಾನ ಮಾಡಲಿಲ್ಲ, ತಮ್ಮ ಬ್ಯಾಂಕುಗಳನ್ನು ದಾನ ಮಾಡಲಿಲ್ಲ, ತಮ್ಮ ಸ್ವತ್ತುಗಳನ್ನು ದಾನವಾಡಲಿಲ್ಲ. ಸರ್ವ ಜನರೂ ದಾನ ಕೊಟ್ಟು, ರಾಷ್ಟ್ರದ ಸ್ವತ್ತನ್ನು ಸಮಾನ ಹಿತಕ್ಕಾಗಿ ಉಪಯೋಗಿಸಿಕೊಳ್ಳಲು ಮುಂದೆ ಬರಲಿಲ್ಲ. ಆದ್ದರಿಂದ ಆ ತತ್ವ ಸಂಪೂರ್ಣವಾಗಿ ನಮ್ಮ ರಾಷ್ಟ್ರದಲ್ಲಿ ಪರಾಜಯ ಪಡೆದಿದೆ. ಅವರ ಮಹತ್ವದ ಉದ್ದೇಶ ಧ್ಯೇಯಕ್ಕೆ, ಸ್ವಾಗತ ಸಿಕ್ಕಲಿಲ್ಲವೆಂಬುದು ಸ್ಪಷ್ಟವಾಗಿದೆ.

ಈಗ ಅವರ ಮಹತ್ವದ ಉದ್ದೇಶ, ಅವರ ಸೇವೆಯ ಫಲವಾಗಿ ಅಲ್ಪ ಸ್ವಲ್ಪ ಗಮನವನ್ನು ಸೆಳೆದಿದೆ. ಅದನ್ನು ಉಪಯೋಗಿಸಿಕೊಂಡು ಇನ್ನೊಂದು ಜಮೀನುದಾರಿ ಪದ್ಧತಿಯನ್ನು ಸ್ಥಾಪಿಸಿ, ಅವರ ಮೂಲಕ ಗೇಣಿಯನ್ನು ವಸೂಲುಮಾಡಿ ಸ್ವಲ್ಪ ಆಡಳಿತವನ್ನು ನಡೆಸೋಣವೆಂದು ಈಗ ಸರ್ಕಾರ ಮುಂದೆ ಬಂದಿದೆ. ಇದು ಅವರ ತತ್ವವನ್ನು ಒಂದು ರೀತಿಯಾಗಿ ಕೊಲೆ ಮಾಡುವುದು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಏಕೆಂದರೆ ಜನರ ಹಿತಕ್ಕಾಗಿ ಕಾಯಿದೆ ಇಲ್ಲದೆ, ತಾವೇ ಸರ್ವಸ್ವವನ್ನೂ ಕೊಡಬೇಕೆಂಬುದು ಅವರ ಉದ್ದೇಶ. ಆದರಿಂದ ಪರಸ್ಪರ ವಿಶ್ವಾಸ, ಸೌಹಾರ್ದ, ಸಹಬಾಳ್ವೆ ಪಡೆದುಕೊಳ್ಳಬಹುದು. ಅದರ ಬದಲು ಕಾಯಿದೆ ರೀತಿಯಲ್ಲಿ, ಹೊಲದಲ್ಲಿ ಈ ಯೋಜನೆಯನ್ನು ತಂದು, ಅಧಿಕಾರ ತೆಗೆದುಕೊಂಡು ಬಲಾತ್ಕಾರವಾಗಿ ಗೇಣಿ ಮುಂತಾದುವನ್ನು ವಸೂಲು ಮಾಡಿದರೆ, ಅವರ ಮೂಲ ತತ್ವಕ್ಕೆ ವಿರೋಧ ಎಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕಾಗಿದೆ.

ಭೂಸುಧಾರಣೆಯನ್ನು ತರುವಂಥ ಜವಾಬ್ದಾರಿ ಸರ್ಕಾರದ ಕೈಯಲ್ಲಿದೆ. ಭೂಸುಧಾರಣೆ ಎಂದರೆ ಈಗಿರುವಂಥ ಹಲಕೆಲವು ರೈತರಿಂದ ಭೂಮಿಯನ್ನು ತೆಗೆದುಕೊಂಡು ಇನ್ನೊಂದು ವರ್ಗಕ್ಕೆ ಕೊಡತಕ್ಕದ್ದಲ್ಲ. ಜನರಿಗೆ ಸುಖವಾದ ಜೀವನ ದೊರೆಯಬೇಕು; ರೈತರಿಗೆ ಈಗಿರುವಂಥ ಭೂಮಿಯ ಅನುಭವದ ಖಾಯಂ ಹಕ್ಕು ಸಿಕ್ಕಬೇಕು, ಅವರ ಶ್ರಮದಿಂದ ಸರ್ವ ವಿಧದಲ್ಲಿಯೂ ಅಭಿವೃದ್ಧಿ ಮಾಡಿಕೊಂಡು ಯಾವ ವರ್ಗಕ್ಕೂ ನಷ್ಟವಾಗದ ರೀತಿಯಲ್ಲಿ ಎಲ್ಲ ಜನರಿಗೂ ಹಿತವಾಗುವ ರೀತಿಯಲ್ಲಿ ಭೂಸುಧಾರಣೆಯನ್ನು ತರುವಂಥಾದ್ದು ಈ ಸರ್ಕಾರದಿಂದ ಸಾಧ್ಯವಾಗಲಿಲ್ಲ. ಜನರ ಕಣ್ಣಿಗೆ ಮಣ್ಣು ಹಾಕುವಂಥ, ಸಾಮಾನ್ಯ ಜನರನ್ನು ವಂಚಿಸುವಂಥ, ಜನರಲ್ಲಿ ಕುತೂಹಲವನ್ನು ಎಬ್ಬಿಸುವಂಥ ಕಾಯಿದೆಗಳನ್ನು ತಂದು ರಾಷ್ಟ್ರಕ್ಕೆ ಗಂಡಾಂತರವನ್ನು ತಂದೊಡ್ಡುತ್ತಾರೆನ್ನುವ ಅನುಮಾನ ಇಲ್ಲಿ ಒದಗಿದೆ. ಅದರ ಜೊತೆಯಲ್ಲಿ ಇಂಥ ಒಂದು ಕಾಯಿದೆಯನ್ನು ತಂದು ಮಾಲಕತ್ವವನ್ನು ಭದ್ರಪಡಿಸತಕ್ಕ ನೀತಿ ಸರಿಯಲ್ಲ. ಆದುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳುವುದು ಉತ್ತಮ. ಒಂದು ವೇಳೆ ಅದನ್ನು ಕ್ರಮಪಡಿಸಬೇಕು, ಈಗಿರುವಂತಹ ಭೂಮಿಯನ್ನು ವಿತರಣೆ ಮಾಡುವುದನ್ನು ಕ್ರಮಪಡಿಸಬೇಕು ಎಂದು ಇದ್ದರೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿ ಮುಂದಿನ ಜನಾಂಗಕ್ಕೆ ಯಾವ ಅಡ್ಡಿ ಆತಂಕಗಳೂ ಬಾರದ ಹಾಗೆ ಎಲ್ಲ ವಿಚಾರಗಳನ್ನೂ ಪರಿಶೀಲಿಸಿ ವರದಿಯನ್ನು ಒಪ್ಪಿಸುವಂತೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸುವುದಗತ್ಯವೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಚಿಕ್ಕ ಮಸೂದೆಯ ಬಗ್ಗೆ ಇಷ್ಟೊಂದು ದೀರ್ಘವಾದ ಭಾಷಣ ನಡೆಯುತ್ತದೆಂದು ನಾನು ತಿಳಿದುಕೊಂಡಿರಲಿಲ್ಲ. ಎರಡೂವರೆ ಗಂಟೆ ಕಾಲ ನಡೆದ ಟೀಕೆಗಳಲ್ಲಿ ಮಾನ್ಯ ಸದಸ್ಯರ ಉದ್ದೇಶ ಒಳ್ಳೆಯದಾಗಿದ್ದರೂ ಬಹುಮಟ್ಟಿಗೆ ವಿಷಯವನ್ನು ಪೂರ್ತಿ ತಿಳಿದುಕೊಳ್ಳದೆ ಟೀಕೆ ಮಾಡಿದ ಪರಿಸ್ಥಿತಿ ಇತ್ತು. ನಾನು ವಿಷಯವನ್ನು ಪೂರ್ತಿ ತಿಳಿಸುವುದಕ್ಕೆ ಪ್ರಯತ್ನಪಟ್ಟರೂ ನಾವು ಮಾತನಾಡಲೇಬೇಕು ಎಂದು ಇರುವುದರಿಂದ ಮಾತನಾಡುತ್ತೇವೆ ಎಂದು ವರ್ತಿಸಿದ್ದರಿಂದ ನಾನು ಏನೂ ಹೇಳುವುದಕ್ಕೆ ಆಗದೆ ಹೋಯಿತು, ಮುಖ್ಯವಾಗಿ ಎರಡೂವರೆ ಗಂಟೆ ಕಾಲದಲ್ಲಿ ನಡೆದ ಚರ್ಚೆಯಲ್ಲಿ ವಿನೋಬಾಜಿಯವರ ತತ್ವವನ್ನು ನಾವೆಲ್ಲರೂ ಒಪ್ಪಿದ್ದರೂ ಈ ವಿಧೇಯಕವನ್ನು ಒಪ್ಪುವುದಿಲ್ಲವೆನ್ನುವ ರೀತಿಯಲ್ಲಿ ವಾದ ನಡೆಯಿತು.

ಮಾನ್ಯ ಸದಸ್ಯರ ಟೀಕೆಗಳಿಗೆಲ್ಲ ಒಂದೇ ಉತ್ತರ ಕೊಡಬಹುದು. ಇದಕ್ಕೆ ಪೂರ್ತಿಯಾಗಿ ವಿನೋಬಾಜಿಯವರ ಆಶೀರ್ವಾದವಿದೆ. ನಾವು ಇದನ್ನು ರಚನೆ ಮಾಡಿದ್ದರೂ ಕೇಂದ್ರ ಸರ್ಕಾರದವರು ವಿನೋಬಾಜಿಯವರ ಅಪ್ಪಣೆಯಂತೆ, ಅವರ ಅನುಮತಿಯನ್ನು ಪಡೆದು ಒಂದು ಮಾಡೆಲ್ ಬಿಲ್ ತಯಾರಿಸಿ ಎಲ್ಲ ರಾಜ್ಯಗಳಿಗೂ ಕಳಿಸಿಕೊಟ್ಟರು. ಅದರ ಪ್ರಕಾರವೇ ನಮ್ಮ ಬಿಲ್ ತಯಾರಾಗಿದೆ. ಅದರ ಜೊತೆಗೆ ಭೂದಾನ ಬಹುಮಟ್ಟಿಗೆ ನಡೆದಿರುವ ಪ್ರಾಂತಗಳು ಎಂದರೆ ಬಿಹಾರ ಮತ್ತು ಆಂಧ್ರ. ಅಲ್ಲಿ ಲಕ್ಷಾಂತರ ಎಕರೆ ಭೂಮಿ ದಾನವಾಗಿದೆ. ಆ ಪ್ರಾಂತಗಳಲ್ಲಿ ಆಗಿರುವ ಕಾನೂನನ್ನು ತರಿಸಿ ಅದರ ಪ್ರಕಾರವೇ, ಏನೂ ವ್ಯತ್ಯಾಸವಿಲ್ಲದೆ ಈ ಕಾನೂನನ್ನು ನಿರೂಪಮಾಡಿದೆ. ವಿನೋಬಾಜಿಯವರು ಒಂದು ಸ್ಥಳದಲ್ಲಿರುವವರಲ್ಲ. ಭೂದಾನ ಬಂದ ತಕ್ಷಣ ಅವರು ಮುಂದಿನ ಊರಿಗೆ ಹೋಗುತ್ತಾರೆ. ಆ ದೃಷ್ಟಿಯಿಂದ ಅನೇಕ ಪ್ರಾಂತಗಳಲ್ಲಿ ಲಕ್ಷಾಂತರ ಎಕರೆ ಜಮೀನು ಬಂದರೂ ಕೂಡ ನೂರರಲ್ಲಿ ಒಂದು ಭಾಗ ಕೂಡ ರೈತರಿಗೆ ಹಂಚಿಕೆಯಾಗಿಲ್ಲ, ಭೂಮಿ ಒಂದು ಆಸ್ತಿ. ತತ್ವದ ವಿಷಯದಲ್ಲಿ ಯಾರು ಎಷ್ಟೇ ಮಾತನಾಡಿದರೂ ಆಸ್ತಿಯ ವಿಷಯಕ್ಕೆ ಬಂದಾಗ ಪ್ರಪಂಚದಲ್ಲೆಲ್ಲ ಒಂದೇ ರೀತಿಯಾಗಿ ನಡೆಯುತ್ತಾರೆ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮತ್ತು ಪ್ರಪಂಚದ ಎಲ್ಲ ಮುಖ್ಯ ದೇಶಗಳಲ್ಲಿಯೂ ನಾನು ನೋಡಿ ಬಂದಿದ್ದೇನೆ. ಎಲ್ಲ ವಿಷಯವನ್ನೂ ಮಾತನಾಡುತ್ತಾರೆ. ಆದರೆ ಆಸ್ತಿಯ ವಿಷಯಕ್ಕೆ ಬಂದಾಗ ಅದೆಲ್ಲ ಕಾನೂನು ಕಟ್ಟಲೆಗೆ ಒಳಪಟ್ಟಿರುತ್ತದೆ. ಆದುದರಿಂದ ಆಸ್ತಿ ಎನ್ನುವ ವಸ್ತು ಕೆಲವು ಕಾನೂನುಗಳಿಗೆ ಒಳಪಟ್ಟಿರಬೇಕಾಗುತ್ತದೆ. ದಾನವಾಗಿ ಬಂದಿರುವ ಭೂಮಿಯನ್ನು ಸರಿಯಾದ ರೀತಿಯಲ್ಲಿ ಜನರಿಗೆ ಹಂಚುವ ವ್ಯವಸ್ಥೆ ಮಾಡುವ ದೃಷ್ಟಿಯಿಂದ ಕಾನೂನು ಮಾಡಲೇಬೇಕು. ವಿನೋಬಾಜಿಯವರು ಸರ್ವೋದಯ ಸಂಘವೆಂದು ಮಾಡಿದ್ದಾರೆ. ಅವರ ಶಿಷ್ಯರಾದ ವಲ್ಲಭ ಸ್ವಾಮಿಯವರು ಮೈಸೂರು ದೇಶದಲ್ಲಿ ಅವರ ಪ್ರತಿನಿಧಿಯಾಗಿದ್ದಾರೆ. ಅವರ ಪೂರ್ಣ ಒಪ್ಪಿಗೆ ಈ ಮಸೂದೆಗೆ ಇದೆ. ಆದುದರಿಂದ ಸರ್ಕಾರದವರು ತತ್ವಕ್ಕೆ ವಿರೋಧವಾಗಿ, ವಿನೋಬಾಜಿಯವರು ಇಟ್ಟುಕೊಂಡಿರುವ ಧ್ಯೇಯಕ್ಕೆ ವಿರೋಧವಾಗಿ ಇದನ್ನು ಮಾಡಿದ್ದಾರೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಶುದ್ಧ ತಪ್ಪು. ವಿನೋಬಾಜಿಯವರ ಆಶೀರ್ವಾದ ಮತ್ತು ಅವರ ಪ್ರತಿನಿಧಿಯಾಗಿರುವ ಸರ್ವೋದಯ ಸಂಘದ ಕಾರ್ಯದರ್ಶಿಯವರಾದ ವಲ್ಲಭ ಸ್ವಾಮಿಯವರ ಪೂರ್ತಿ ಸಹಕಾರ ಮತ್ತು ಒಪ್ಪಿಗೆಯಿಂದ ಈ ಮಸೂದೆಯನ್ನು ಸರ್ಕಾರ ಸಭೆಯ ಮುಂದೆ ತಂದಿದೆ.

ಎರಡನೆಯ ವಿಷಯ ಬೋರ್ಡಿನ ನೇಮಕಕ್ಕೆ ಸಂಬಂಧಪಟ್ಟದ್ದು. ಮೈಸೂರು ರಾಜ್ಯದಲ್ಲಿ ಅನೇಕ ಬೋರ್ಡುಗಳಾಗಿ ಅವು ನಮ್ಮ ಜನಗಳು ಮೇಯುವುದಕ್ಕೆ ಹುಲ್ಲುಗಾವಲುಗಳಂತಾಗಿವೆ ಎಂದು ಅನೇಕ ಸದಸ್ಯರು ಮಾತನಾಡಿದರು. ಈ ಬೋರ್ಡನ್ನು ಸರ್ಕಾರ ಮಾಡುವುದೇ ಇಲ್ಲ. ಸರ್ಕಾರ ಇದರಲ್ಲಿ ಒಬ್ಬ ವ್ಯಕ್ತಿಯನ್ನೂ ನೇಮಿಸುವುದಿಲ್ಲ, ಆ ಅಧಿಕಾರ ಸರ್ಕಾರಕ್ಕೆ ಇಲ್ಲ. ವಿನೋಬಾಜಿಯವರು ಯಾರ ಹೆಸರುಗಳನ್ನು ಸರ್ಕಾರಕ್ಕೆ ತಿಳಿಸುತ್ತಾರೆಯೋ ಅಂಥವರು ಮಾತ್ರ ಈ ಬೋರ್ಡಿನಲ್ಲಿ ಸದಸ್ಯರಾಗಿರುತ್ತಾರೆಂದು ಕಾನೂನು ಪ್ರಕಾರ ಮಾಡಿರುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಕಾಂಗ್ರೆಸ್‌ನವರು ತಮ್ಮ ಸ್ವಂತ ಜನಗಳು ಮೇಯುವುದಕ್ಕೆ ಈ ಬೋರ್ಡನ್ನು ಮಾಡುತ್ತ ಇಲ್ಲ. ಎದುರು ಪಕ್ಷದವರು ಮಾತನಾಡಿದುದನ್ನು ನೋಡಿದರೆ ವಿನೋಬಾಜಿಯವರ ಶಿಷ್ಯ ಮಂಡಲಿಯವರು ಜಾಸ್ತಿ ಇದ್ದಹಾಗೆ ಕಾಣುತ್ತದೆ. ಆದ್ದರಿಂದ ಅವರಲ್ಲಿ ಅನೇಕರಿಗೆ ಈ ಬೋರ್ಡಿನಲ್ಲಿ ಸದಸ್ಯರಾಗಲು ಅವಕಾಶವಿದೆ.

ಎಲ್ಲರೂ ಒಳ್ಳೆಯ ಉದ್ದೇಶದಿಂದಲೇ ಮಾತನಾಡಿದ್ದಾರೆ. ಆದರೆ ಇದರ ತಿಳಿವಳಿಕೆ ಇಲ್ಲದೆ ಅವರು ಸುಮ್ಮನೆ ಟೀಕೆ ಮಾಡಿ ಎರಡೂವರೆ ಗಂಟೆಕಾಲ ಮಾತನಾಡಿದ್ದಾಯಿತು. ಅವರಿಗೆಲ್ಲ ವಿನೋಬಾಜಿಯವರಲ್ಲಿರುವ ಪ್ರೀತಿ ವಿಶ್ವಾಸಗಳಿಗೆ ಬಹಳ ಸಂತೋಷಪಡುತ್ತೇನೆ. ಮುಂದೆ ಸಂದರ್ಭ ಬಂದಾಗ ಯಾರಲ್ಲಾದರೂ ಹೆಚ್ಚಿಗೆ ಭೂಮಿ ಇದ್ದರೆ ಅದು ದಾನವಾಗಿ ಬರುವುದಕ್ಕೆ ಪ್ರಯತ್ನಪಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಎಂದರೆ ವಿನೋಬಾ ಅವರ ತತ್ವದ ಬಗ್ಗೆ ಒಂದೆರಡು ಟೀಕೆ ಬಂದವು—ಇದು ಎಂತಹ ಚಳುವಳಿ ಎಂದು—ಅದು ಏನಾದರೂ ಆಗಲಿ ದೊಡ್ಡ ತತ್ವಗಳು ಬಂದಾಗ ದೊಡ್ಡದಾದ ಟೀಕೆಗಳೂ ಇದ್ದೇ ಇರುತ್ತವೆ. ಒಂದು ಮಾತನ್ನು ಖಡಾಖಂಡಿತವಾಗಿ ಹೇಳಬಹುದು ಇದು ಒಳ್ಳೆಯ ವಾತಾವರಣವನ್ನು ಕಲ್ಪನೆ ಮಾಡಿಕೊಟ್ಟಿದೆ— ಭೂ ಸುಧಾರಣೆ ಮಾಡುವುದಕ್ಕೆ ಸೈಕಲಾಜಿಕಲ್ ಅಟ್ಮಾಸ್‌ಫಿಯರ್ ಉಂಟಾಗಿದೆ ಹಿಂದೂಸ್ತಾನದಲ್ಲಿ ಹೆಚ್ಚು ಭೂಮಿಯನ್ನು ಇಟ್ಟುಕೊಂಡಿರುವವರು ಭೂ ರಹಿತರಿಗೆ ಭೂಮಿಯನ್ನು ಕೊಡಬೇಕು—ಉಳುವವನೇ ಭೂಮಿಯ ಒಡೆಯನಾಗಿರಬೇಕು ಎಂಬ ವಾತಾವರಣವನ್ನು ಕಲ್ಪನೆ ಮಾಡಿರತಕ್ಕ ಈ ಸಂದರ್ಭದಲ್ಲಿ ಇದನ್ನು ತಂದಿರುತ್ತೇವೆ. ಕಬ್ಬಿಣವನ್ನು ಕಾಯಿಸಿದಾಗ ಹೊಡೆದರೆ ಬೇಕಾದ ರೀತಿಯಲ್ಲಿ ಬರುತ್ತದೆ—ಕಾಯಿಸದೇ ಹೊಡೆದರೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಏನು ಮಾಡಿದರೂ ಬಗ್ಗಿಸುವುದಕ್ಕಾಗುವುದಿಲ್ಲ. ಇಂತಹ ಒಂದು ವಾತಾವರಣವನ್ನು ಕಲ್ಪನೆ ಮಾಡಿದ ಕೀರ್ತಿ ವಿನೋಬಾ ಅವರಿಗೆ ಸಲ್ಲುತ್ತದೆ. ಆ ದೃಷ್ಟಿಯಿಂದ ಈ ಒಂದು ಕಾನೂನನ್ನು ತಂದು ಇಟ್ಟಿದ್ದೇವೆಯೇ ಹೊರತು, ವಿನೋಬಾ ಅವರ ತತ್ವಕ್ಕೆ ಇದು ಎಳ್ಳಷ್ಟೂ ವಿರೋಧವಾಗಿಲ್ಲ, ಅವರ ಒಪ್ಪಿಗೆ ಪಡೆದೇ ಒಂದು ಬೋರ್ಡನ್ನು ನಿರ್ಮಾಣ ಮಾಡುತ್ತೇವೆ; ಅದಕ್ಕೆ ಅವರು ನಾಮಿನೇಷನ್ ಮಾಡುತ್ತಾರೆ. ಬಿಹಾರ, ಬಂಗಾಳ, ಬೊಂಬಾಯಿ ಇಲ್ಲೆಲ್ಲಾ ಈ ಬೋರ್ಡಿಗೆ ವಿನೋಬಾ ಅವರು ನಾಲ್ಕು ವರ್ಷಕ್ಕೆ ಒಮ್ಮೆ ಪಟ್ಟಿ ಕಳುಹಿಸುತ್ತಾ ಇದ್ದಾರೆ. ಆದ್ದರಿಂದ ಈ ತತ್ವಕ್ಕೂ ನಿಮ್ಮ ಮನಸ್ಸಿನಲ್ಲಿರುವುದಕ್ಕೂ ಏನೂ ವ್ಯತ್ಯಾಸವಿಲ್ಲ, ನಿಮ್ಮ ಮನಸ್ಸಿನಲ್ಲಿರುವ ರೀತಿಯಲ್ಲೇ ಮಾಡಿದೆ ಎಂದು ವಿನೋಬ ಅವರ ಶಿಷ್ಯಮಂಡಲಿ ಯಾದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ತಮಗಳಿಗೆಲ್ಲಾ ವಂದನೆಗಳನ್ನರ್ಪಿಸಿ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—The question is:

"That the Mysore Bhoodan Yagna Bill, 1963 as passed by Legislative Council, be taken into consideration."

The motion was adopted.

Mr. SPEAKER.—The question is:

"That clauses 2 and 3 stand part of the Bill"

The motion was adopted.

Clauses 2 and 3 are added to the Bill.

Sri B. R. SUNTHANKAR.—I beg to move an amendment to clause 4.

"That the proviso to sub-clause 2 be deleted."

Mr. SPEAKER.—The question is:

"That the proviso to sub-clause 2 to be deleted."

The amendment was negatived.

Mr. SPEAKER.—The question is:

"That clause 4 stand part of the Bill."

The motion was adopted.

Sri B. R. SUNTHANKAR.—I beg to move:

(i) "That the proviso to sub-clause (1) be deleted.

(ii) In sub-clause 2 the words "on the recommendation of Sri Acharya Vinobha Bhave be deleted."

Mr. SPEAKER.—Amendment moved:

(i) " That the proviso to sub-clause (1) be deleted."

(ii) " That in sub-clause 2 the words "on the recommendations of Sri Acharya Vinobha Bhave be deleted."

Sri C. J. MUCKANNAPPA.—May I know the intention behind this proviso?

Mr. SPEAKER.—The Hon'ble Member was not present during the Debate. Now he is asking the questions.

ಶ್ರೀ ಎಂ. ವಿ. ಕೃಷ್ಣಪ್ಪ.—ಪೂಜ್ಯ ಭಾವೆ ಅವರ ಈ ಪ್ರಚಂಡವಾದ ಚಳುವಳಿಯನ್ನು ಅವರು ಹಿಂದೂಸ್ಥಾನದಲ್ಲಿ ಪ್ರಪಂಚದಲ್ಲೇ ಮೊದಲು ಪ್ರಾರಂಭ ಮಾಡಿದ್ದರಿಂದ ಅವರ ಗೌರವದ ರೂಪವಾಗಿ ಸರ್ಕಾರದವರು ಅವರಿಗೆ ಅವರ ನಾಮಿನೇಷನ್ನು ಈ ಬೋರ್ಡ್‌ನಲ್ಲಿ ಸೇರಿಸಿರಬೇಕೆಂದು ಅವಕಾಶ ಕಲ್ಪಿಸಿಕೊಡಲು ಎಲ್ಲಾ ಸರ್ಕಾರಗಳೂ ಒಂದು ನಿಯಮವನ್ನು ಮಾಡಿಕೊಂಡಿವೆ. ಕೇಂದ್ರಸರ್ಕಾರದ ಮಸೂದೆಯಲ್ಲೂ ಕೂಡ ಇದು ಇದೆ. ಈಗಾಗಲೇ ಅನೇಕ ಟೀಕೆಗಳು ಬಂದಿವೆ, ಕಾಂಗ್ರೆಸ್ ಮಂತ್ರಿಗಳು ಕೆಲವರು ಹೋಗುವವರು ಇದ್ದಾರೆ, ಅವರನ್ನು ಸೇರಿಸುವುದಕ್ಕೆ ಇಂತಹ ಬೋರ್ಡುಗಳನ್ನು ಮಾಡುತ್ತಾ ಇದ್ದಾರೆ ಎಂದು ಆ ಒಂದು ಆಪಾದನೆಯನ್ನು ತಪ್ಪಿಸಿಕೊಳ್ಳುವುದಕ್ಕೆ ವಿನೋಬಾ ಅವರೇ ತಮ್ಮ ನಾಮಿನೇಷನ್ನು ಮೂಲಕ ಇದಕ್ಕೆ ನೇಮಕ ಮಾಡಲಿ ಎಂದು ಹೇಳಿ ಈ ರೀತಿ ಮಾಡಿದ್ದೇವೆ.

Mr. SPEAKER.—The question is :

(i) " That the proviso to sub-clause (1) be deleted."

(ii) That in sub-clause 2 the words "on the recommendation of Sri Acharya Vinobha Bhave" be deleted".

The amendment was negatived.

Mr. SPEAKER.—The question is :

" That clause 5 stand part of the Bill."

The motion was adopted.

Clause 5 was added to the Bill.

CLAUSES 6 to 12

Mr. SPEAKER.—The question is:

" That the clauses 6 to 12, both the clauses stand part of the Bill."

The motion was adopted.

Clauses 6 and 12 both inclussive were added to the Bill.

Sri B. R. SUNTHANKAR.—Sir, I beg to move :

"That in clause 13, sub-clause (1), line 2, the words "in consultation with Shri Acharya Vinobha Bhave" shall be deleted."

Mr. SPEAKER.—Amendment moved:

" That in Clause 13, sub-clause (1), line 2, the words " in consultation with Shri Acharya Vinobha Bhave" shall be deleted."

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರಾಜ್ಯದಲ್ಲಿರತಕ್ಕ ಜನರು ಈ ಭೂದಾನಕ್ಕಿಂತ ಹೆಚ್ಚಿನದಾದ ಮಂತ್ರಿದಾನ ಬೇಕೆಂದೂ ಅದರ ಆವಶ್ಯಕತೆ ಬಹಳವಾಗಿರುತ್ತದೆಂದೂ ಹೇಳುತ್ತಿರುವಾಗ ನಮ್ಮ ಮಂತ್ರಿಗಳ ಮನಸ್ಸು ಆ ಕಡೆಗೆ ಹೋಗುತ್ತಿಲ್ಲ. ಈ ಹಿಂದೆ 3-4 ವರ್ಷಗಳಲ್ಲಿ ಭಾವೆಯವರು ಈ ಪ್ರಾಂತ್ಯದಲ್ಲಿ ಸಂಚರಣೆ ಬಂದಿದ್ದಾಗ, ಇದನ್ನು ಪೂರ್ಣ ಯಶಸ್ವಿಗೊಳಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಅನೇಕ ಕಡೆ ಚಪ್ಪರಗಳನ್ನೂ ಹಾಕಿದ್ದರು. ಆದರೆ ಈಗ ಅನೇಕ ಜನಗಳಿಗೆ ಈ ದಾನ ಕೊಟ್ಟಿದ್ದ ಜಮೀನು ಕ್ರಯವಾಗಿರುತ್ತದೆ. ಎರಡು ಮೂರು ಕೈಗಳು ದಾಟಿಹೋಗಿದೆ, ಈಗ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಬಹಳ ಕಷ್ಟ. ಪೂಜಾರಿಗೆ ದುಡ್ಡು ಕೊಟ್ಟು ಆಶೀರ್ವಾದ ಪಡೆದಹಾಗೆ ಆಗುತ್ತದೆ. ಯಾರೋ ಬೇರೆಯವರು ಕೊಟ್ಟಿರತಕ್ಕ ದಾನದ ಬಗ್ಗೆ ಮಂತ್ರಿಗಳು ಪ್ರೋತ್ಸಾಹ ತೋರಿಸಲು ಹೊರಟಿದ್ದಾರೆ. ಇವರ ಕಡೆಯಿಂದ ಇಂಥ ಯಾವ ದಾನವೂ ಬಂದಿಲ್ಲ. ಈ ಬಿಲ್ಲನ್ನು ಮುಂದುವರಿಸುವುದಕ್ಕೆ ಇವರಿಗೆ ಯಾರಿಗೂ ಮನಸ್ಸಿಲ್ಲ, ಇದನ್ನು ಕೇಳತಕ್ಕವರಿಗಾದರೂ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ.

ಶ್ರಿ ಎಂ. ವಿ. ಕೃಷ್ಣಪ್ಪ,—ನಾನು ಇವರು ಹೇಳಿದ್ದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

Mr. SPEAKER.—Is the Hon'ble Minister for Revenue accepting the amendment ?

Sri M. V. KRISHNAPPA.—No, Sir.

Sri B. R. SUNTHANKAR.—In this clause it is stated:

"in consultation with Sri Acharya Vinoba Bhave."

Nothing is clear as to what will happen after the death of Vinoba Bhave? Where the Government should go to consult him? The Government will have to go to Heavens.

Sri M. V. KRISHNAPPA.—Please read clause 4. It is very clear. Even in his life time, we will just take the names from him. Ultimately, it is the Government which will nominate. Second portion also says that if by a specific time Vinobaji does not nominate, Government has the right to nominate.

Sri B. R. SUNTHANKAR.—According to this .....

Mr. SPEAKER.—Consultation can be only during his life time. Does the Hon'ble member seriously suggest that consultation is after his death? The question is:

"That in Clause 13, sub-clause (1), line 2, the words "in consultation with Sri Acharya Vinobha Bhave" shall be deleted."

The amendment was negatived.

Mr. SPEAKER.—The question is:

"That Clause 13 stand part of the Bill."

The motion was adopted.

Clause 13 was added to the Bill.

Mr. SPEAKER.—The question is:

"That Clauses 14, 15 and 16 stand part of the Bill."

The motion was adopted.

Clauses 14, 15 and 16 were added to the Bill.

CLAUSE 17.

Sri B. R. SUNTHANKAR.—Sir, I beg to move:

"That in Clause 17, item (iii), sub-clause (2), the words "and/or Scheduled Tribes" shall be added after the words "Scheduled Castes."

Mr. SPEAKER.—Amendment moved:

"That in Clause 17, item (iii), sub-clause (2), "the words" "and/or Scheduled Tribes" shall be added after the words "Scheduled Castes."

Is the Hon'ble Minister accepting it?

Sri M. V. KRISHNAPPA.—No, Sir.

Mr. SPEAKER.—The question is:

"That in Clause 17, item (iii), sub-clause (2), the words "and/or Scheduled Tribes" shall be added after the words "Scheduled Castes."

The amendment was negatived.

Mr. SPEAKER.—The question is :
"That Clause 17 stand part of the Bill."

The motion was adopted.

Clause 17 was added to the Bill.

Mr. SPEAKER.—The question is :
"That Clause 18 stand part of the Bill."

The motion was adpoted.

Clause 18 was added to the Bill.

CLAUSE 19.

Sri B. R. SUNTHANKAR.—Sir, I beg to move :
"That in Clause 19"
"Sub-clause (2) shall be deleted."

Mr. SPEAKER.—Amendment moved :
'That in Clause 19"
"Sub-clause (2) shall be deleted."
Is the Hon'ble Minister accepting it ?

Sri M. V. KRISHNAPPA.—No, Sir.

Mr. SPEAKER.—The question is :
"That in clause 19
"Sub-clause (2) shall be deleted."

The amendment was negatived.

Mr. SPEAKER.—The question is :
"That Clause 19 stand part of the Bill."

The motion was adopted.

Clause 19 was added to the Bill.

Mr. SPEAKER.—The question is :
"That Clauses 20 to 30, both inclusive, stand part of the Bill."

The motion was adopted.

"That Clauses 20 to 30, both inclusive, stand part of the Bill."

CLAUSE 1, TITLE AND PREAMBLE.

Mr. SPEAKER.—The question is :—
"That Clause 1, the Title and Preamble stand part of the Bill."

Motion to pass.

Sri M. V. KRISHNAPPA.—Sir, I beg to move :
"That the Mysore Bhoodan Yagna Bill, 1963 as passed by the Legislative Council, be passed."

ಶ್ರೀ ಎಸ್. ಗೋಪಾಲಗೌಡ.—ನನಗೆ ಈ ಮಸೂದೆ ಪಾಸಾಗುವುದರಲ್ಲಿ ಭಾಗಿಯಾಗಲು ಇಷ್ಟವಿಲ್ಲ. ಇದಕ್ಕೆ ನನ್ನ ಸಂಪೂರ್ಣ ವಿರೋಧವಿದೆ. ಆದುದರಿಂದ ನಾನು ವಾಕ್‌ಔಟ್ ಮಾಡುತ್ತೇನೆ.

(The Hon'ble member withdrew from the House).

Mr. SPEAKER.—The question is :—

"That the Mysore Bhoodan Yagna Bill, 1963 as passed by the Legislative Council, be passed."

The motion was adopted.

Mr. SPEAKER.—The House will now adjourn to meet at 12-30 P.M. tomorrow.

The House adjourned at Six of the Clock to meet again at Thirty Minutes past Twelve of the Clock on Tuesday, the 10th September 1963.

WD 1014 GPB—900—18-10-1963